ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 153 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 18.12.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 153 • PRGI No:KARKAN/2023/88055 • VIJAYANAGARA • 18.12.2024 • Wednesday • Page:04 • Rs:2

BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits

No.1 HAMPI TIMES LEADING VIJAYANAGARA District News Paper

ಸುದ್ದಿ, ಜಾಹೀರಾತು ಕಚೇರಿ
ವಿಜಯನಗರ ಜಿಲ್ಲೆಯ ಸುದ್ದಿ ಜಾಹೀರಾತು ಪ್ರಕಟಣೆಗಾಗಿ ಈ ಕೆಳಗಿನ ಕಚೇರಿ ವಿಳಾಸ ಸಂಪರ್ಕಿಸಿ
ಹಂಪಿ ಟೈಮ್ಸ್
ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
94486 33038
Email: hampitimes@gmail.com

ಹಂಪಿ ಟೈಮ್ಸ್
ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ
ಈ ದಿನದ (20-12-2024) ಚಿತ್ರಸ್ಪರ್ಧೆ
ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತು ಮತ್ತು ತಾಮ್ರ ಚೂರುಗಳ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆ ಮಾಡುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ?
ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಸಲು ಮನವಿ.
10ನೇ ತರಗತಿ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.
ವಾಟ್ಸ್‌ಪ್ ನಂ: 99726 03099
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
94486 33038

ನೀರಿನ ವಿದ್ಯುತ್ ವಿಭಜನೆಯಲ್ಲಿ ಉಪಯೋಗಿಸುವ ಉಪಕರಣದ ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ 43 ಶಾಲೆಗಳು ಭಾಗಿ

ವಿಜ್ಞಾನ ಚಿತ್ರ ಸ್ಪರ್ಧೆ-3 ಅತ್ಯುತ್ತಮ ಚಿತ್ರಗಳು

ಯು.ಪಲ್ಲವಿ ಪ್ರಥಮ, ಆರ್.ರುಹೀನ ದ್ವಿತೀಯ, ಬಿ.ಟಿ.ಉಷ ತೃತೀಯ

■ ಹಂಪಿ ಟೈಮ್ಸ್ ಹೊಸಪೇಟೆ

ಈ ಬಾರಿ ಫಲಿತಾಂಶ ನಮ್ಮದೆ ಎಂಬ ಘೋಷವಾಕ್ಯದಡಿ ಹಂಪಿ ಟೈಮ್ಸ್ ಬಳಗ ನಿರಂತರವಾಗಿ ಪರೀಕ್ಷಾ ಸಿದ್ಧತೆ ಹಾಗೂ ಹೆಚ್ಚಿನ ಅಂಕಗಳಿಸಲು ಅನುಕೂಲವಾಗುವಂತೆ ಶೈಕ್ಷಣಿಕ ವರ್ಷದ ಆರಂಭದಿಂದಲೂ ಪ್ರಶ್ನೋತ್ತರಗಳನ್ನು ದಿನಕ್ಕೊಂದು ವಿಷಯದಂತೆ ಪ್ರಕಟಿಸುತ್ತಾ ಬಂದಿದೆ. ಎಸ್ಸೆಸ್ಸೆಲ್ಸಿ ಪರೀಕ್ಷೆ ಸಮೀಪಿಸುತ್ತಿರುವುದರಿಂದ ಮಕ್ಕಳಲ್ಲಿ ಪರೀಕ್ಷಾ ಭಯ ತೊಲಗಿಸಿ, ಆತ್ಮವಿಶ್ವಾಸ ಹೆಚ್ಚಿಸುವ ನಿಟ್ಟಿನಲ್ಲಿ ಮಕ್ಕಳಿಗೆ ಪ್ರತಿ ಶುಕ್ರವಾರ ವಾರ್ಷಿಕ ಪರೀಕ್ಷೆಯಲ್ಲಿ ಪರೀಕ್ಷೆಯಲ್ಲಿ ಬರಬಹುದಾದ ಸಂಭವನೀಯ ವಿಜ್ಞಾನ ಚಿತ್ರಗಳನ್ನು ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿದೆ. ಚಿತ್ರಸ್ಪರ್ಧೆಯಲ್ಲಿ ಹೊಸಪೇಟೆ ತಾಲೂಕಿನ 21 ಶಾಲೆಗಳು, ಹಗರಿಬೊಮ್ಮನಹಳ್ಳಿ ತಾಲೂಕಿನ 18 ಶಾಲೆ, ಕೊಟ್ಟೂರು ತಾಲೂಕಿನ 1, ಹರಪನಹಳ್ಳಿ ತಾಲೂಕಿನ 1, ಗದಗ ಜಿಲ್ಲೆಯ 1 ಹಾಗೂ ಶಿವಮೊಗ್ಗ ಜಿಲ್ಲೆಯ 1 ಶಾಲೆ ಸ್ಪರ್ಧೆಯಲ್ಲಿ ಭಾಗವಹಿಸಿ, ಶಾಲೆಯಲ್ಲೆ ಅತ್ಯುತ್ತಮ ಚಿತ್ರ ಬಿಡಿಸಿದ ಚಿತ್ರವನ್ನು ಕಳಿಸಿದ್ದರು. ಒಟ್ಟು ಚಿತ್ರಗಳಲ್ಲಿ ಮೂರು ಅತ್ಯುತ್ತಮ ಚಿತ್ರಗಳನ್ನು ಆಯ್ಕೆಯಾಗಿವೆ. ಹೊಸಪೇಟೆಯ ಸರ್ಕಾರಿ ಬಾಲಕಿಯರ ಪ್ರೌಢಶಾಲೆ (ಮಾ.ಪು) ವಿದ್ಯಾರ್ಥಿನಿ ಯು ಪಲ್ಲವಿ ಪ್ರಥಮ ಸ್ಥಾನ ಪಡೆದಿದ್ದಾರೆ. ಹೊಸಪೇಟೆ ಸಂ.ಪ.ಪೂ.ಕಾಲೇಜ್ (ಪ್ರೌಢಶಾಲಾ ವಿಭಾಗ) ರುಹಿನಾ ದ್ವಿತೀಯ, ಹ.ಬೊ.ಹಳ್ಳಿ ತಾಲೂಕಿನ ಬೆಣಕಲ್ಲು ಗ್ರಾಮದ ಶ್ರೀ ಗುರುಬಸವೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿನಿ ಬಿ.ಟಿ.ಉಷ ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಆಯ್ಕೆ ತಂಡದ ಮುಖ್ಯಸ್ಥರಾದ ಎಸ್.ಸಿ.ಶಿವತನಯ ತಿಳಿಸಿದ್ದಾರೆ.



ಯು ಪಲ್ಲವಿ (ಪ್ರಥಮ ಸ್ಥಾನ)
ಸರ್ಕಾರಿ ಬಾಲಕಿಯರ ಪ್ರೌಢಶಾಲೆ (ಮಾ.ಪು) ಹೊಸಪೇಟೆ.



ಆರ್. ರುಹೀನ (ದ್ವಿತೀಯ)
ಸಂ.ಪ.ಪೂ.ಕಾಲೇಜ್ (ಪ್ರೌಢಶಾಲಾ ವಿಭಾಗ), ಚಿತ್ತವಾಡ್ಗಿ, ಹೊಸಪೇಟೆ



ಬಿ.ಟಿ ಉಷ (ತೃತೀಯ)
ಶ್ರೀ ಗುರುಬಸವೇಶ್ವರ ಪ್ರೌಢಶಾಲೆ, ಬೆಣಕಲ್ಲು ಹ.ಬೊ.ಹಳ್ಳಿ ತಾಲೂಕು

ಮಾಳೆಹಳ್ಳಿ ಪ್ರಾಥಮಿಕ ಶಾಲೆಗೆ ಅಧಿಕಾರಿಗಳು ಭೇಟಿ, ಕಟ್ಟಡ ಪರಿಶೀಲನೆ

■ ಹಂಪಿ ಟೈಮ್ಸ್ ಕೂಡ್ಲಿಗಿ

ತಾಲೂಕಿನ ಮಾಳೆಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸೋಮವಾರ ಶಿಕ್ಷಣ ಇಲಾಖೆಯ ಬಿಆರ್‌ಪಿ ರೇವಣ ಸಿದ್ದಪ್ಪ ಹಾಗೂ ಸಿಆರ್‌ಪಿಗಳಾದ ಮೌನೇಶಾಚಾರ್.ಬಿ, ಕುಲುಮೆಹಟ್ಟಿ ಮತ್ತು ಸಿಆರ್‌ಪಿ ತಿಪ್ಪೇಸ್ವಾಮಿ ಹೂಡೇಂ ಇವರು ಶಾಲೆಗೆ ಭೇಟಿ ನೀಡಿ ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳನ್ನು ಪರಿಶೀಲಿಸಿದರು.

ಡಿ.14ರಂದು "ಇಂದು ಯಾರಿಗೆ ಯಾವ ಪಾಠ ಮಾಡ್ತೀರಿ ಸರ್" ಶೀರ್ಷಿಕೆಯಡಿ ಹಂಪಿ ಟೈಮ್ಸ್ ವರದಿ ಪ್ರಕಟಿಸಿತ್ತು. ವರದಿ ಬೆನ್ನಲ್ಲೆ ಶಿಕ್ಷಣ ಇಲಾಖೆ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ, ಶಿಥಿಲಗೊಂಡಿರುವ ಕಟ್ಟಡದಲ್ಲಿ ಮಕ್ಕಳನ್ನು ಕೂಡಿಸದೆ, ಮಕ್ಕಳಿಗೆ ಶಿಕ್ಷಣ ಕೊರತೆಯಾಗದಂತೆ ಅಗತ್ಯ ಕ್ರಮವಹಿಸಬೇಕು ಎಂದು ಮುಖ್ಯಗುರುಗಳಿಗೆ ಸೂಚಿಸಿದ್ದಾರೆ. ಶಾಲೆಗೆ ಶಿಕ್ಷಕರು ಸಮಯಕ್ಕೆ ಸರಿಯಾಗಿ ಹಾಜರಾಗಿ ಶೈಕ್ಷಣಿಕ ಮಾರ್ಗದರ್ಶಿಯಂತೆ ಪಾಠ ಪ್ರವಚನ ನಡೆಸಬೇಕು. ಶಿಥಿಲಾವಸ್ಥೆಯ ಕಟ್ಟಡದ ವರದಿಯನ್ನು ಸಂಬಂಧಿಸಿದ ಹಿರಿಯ ಅಧಿಕಾರಿಗಳಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಕೆಎಂಆರ್‌ಸಿ ಅನುದಾನದಲ್ಲಿ ಈಗಾಗಲೇ ಹಣ ತೆಗೆದಿರಿಸಲಾಗಿದ್ದು, ಸುಸಜ್ಜಿತ ಕಟ್ಟಡಕ್ಕಾಗಿ ಹೆಚ್ಚಿನ ಅನುದಾನದ ನಿರೀಕ್ಷೆಯಲ್ಲಿದ್ದು, ಅನುದಾನ ಬಿಡುಗಡೆಯಾದ ತಕ್ಷಣ ಕಟ್ಟಡ ಕಾರ್ಯ ಕಾರ್ಯಾರಂಭವಾಗಲಿದೆ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ ಅವರ ಆಪ್ತ ಸಹಾಯಕ ಕೆ.ಎನ್.ದಿನಕರ ಅವರು ಪತ್ರಿಕೆಗೆ ತಿಳಿಸಿದ್ದಾರೆ.

ಆನಂದ ಬಾಣ



ಹಂಪಿಯಲ್ಲಿ ಫಲಪೂಜೆ, ಶಿವಪಾರ್ವತಿಗೆ ನಿಶ್ಚಿತಾರ್ಥ

ಹಂಪಿಯಲ್ಲಿ ಫಲಪೂಜಾ ಮಹೋತ್ಸವದಂಗವಾಗಿ ಮಂಗಳವಾರ ಶ್ರೀ ಪಂಪ ವಿರೂಪಾಕ್ಷೇಶ್ವರ ಸ್ವಾಮಿಗೆ ಸುವರ್ಣ ರತ್ನ ಖಚಿತ ಕಿರೀಟವನ್ನು ಅಲಂಕರಿಸಲಾಯಿತು. ರಾತ್ರಿ ಶ್ರೀ ರಾಮಲಕ್ಷ್ಮಣ ದೇವಸ್ಥಾನದ ಅಂಗಳದಲ್ಲಿ ಶ್ರೀ ವಿರೂಪಾಕ್ಷೇಶ್ವರ ಮತ್ತು ಪಂಪಾಂಬಿಕೆ ದೇವಿಗೆ ನಿಶ್ಚಿತಾರ್ಥ ಕಾರ್ಯಕ್ರಮ ಭಕ್ತರ ಸಮ್ಮುಖದಲ್ಲಿ ಜರುಗಿತು.

ಎಸ್ಡಿಎಂಸಿ ಪದಾಧಿಕಾರಿಗಳ ಆಯ್ಕೆ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಪಟ್ಟಣದ ಆದರ್ಶ ವಿದ್ಯಾಲಯದ ಎಸ್ಡಿಎಂಸಿ ಪದಾಧಿಕಾರಿಗಳನ್ನು ಇತ್ತೀಚೆಗೆ ಆಯ್ಕೆ ಮಾಡಲಾಯಿತು. ಎಸ್.ಕೆ.ಜಗದೀಶ್(ಅಧ್ಯಕ್ಷ), ಎಚ್.ಮಲ್ಲಿಕಾರ್ಜುನಗೌಡ(ಉಪಾಧ್ಯಕ್ಷ), ಜಿ.ನಾಗರಾಜ, ಅಕ್ಕಿ ಬಸವರಾಜ, ಪಿ.ವೆಂಕನಗೌಡ, ಎಚ್.ಎಂ.ಮರುಳರಾಧ್ಯ, ಶಾರದಾ, ಎಲ್.ರೇಷ್ಮಾ, ಶಹನಾಜ್(ಸದಸ್ಯರು) ಆಯ್ಕೆಯಾಗಿದ್ದಾರೆ ಎಂದು ಎಸ್ಡಿಎಂಸಿ ಕಾರ್ಯದರ್ಶಿ, ಮುಖ್ಯಶಿಕ್ಷಕ ರವಿನಾಯ್ಕ ತಿಳಿಸಿದ್ದಾರೆ.

ವಿಜೃಂಭಣೆಯಿಂದ ಜರುಗಿದ ಕೊಟ್ಟೂರೇಶ್ವರ ಹೂವಿನ ರಥೋತ್ಸವ

ಕಾರ್ತಿಕೋತ್ಸವ ಅಜ್ಞಾನ ತೊಲಗಿಸುವ ಪ್ರತೀಕ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಕಾರ್ತಿಕೋತ್ಸವವು ಅಜ್ಞಾನವನ್ನು ತೊಲಗಿಸಿ ಜ್ಞಾನವನ್ನು ಹೆಚ್ಚಿಸುವ ಪ್ರತೀಕವಾಗಿದೆ ಎಂದು ಕೊಟ್ಟೂರೇಶ್ವರ ದೇವಸ್ಥಾನ ಸಮಿತಿಯ ಡಿ.ಎಂ.ತೋಟಯ್ಯ ಹೇಳಿದರು. ತಾಲೂಕಿನ ತಂಬ್ರಹಳ್ಳಿ ಗ್ರಾಮದಲ್ಲಿ ಕೊಟ್ಟೂರೇಶ್ವರ ಸ್ವಾಮಿಯ ಕಾರ್ತಿಕೋತ್ಸವ ನಿಮಿತ್ತ ಹೂವಿನ ರಥೋತ್ಸವದಲ್ಲಿ ಮಾತನಾಡಿದ ಅವರು, ಕೊಟ್ಟೂರೇಶ್ವರ ಕಾರ್ತಿಕೋತ್ಸವವನ್ನು ಗ್ರಾಮದಲ್ಲಿ ಪ್ರತಿವರ್ಷ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಆಚರಣೆಗಳು ಗ್ರಾಮದ ಸಾಮರಸ್ಯವನ್ನು ಹೆಚ್ಚಿಸುತ್ತವೆ ಎಂದರು.

ಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ ಅಭಿಷೇಕ, ವಿಶೇಷ ಪೂಜೆ ನೆರವೇರಿಸಿದರು. ರಾತ್ರಿ ದೀಪ ಬೆಳಗಿಸಿ ಕಾರ್ತಿಕೋತ್ಸವಕ್ಕೆ ಚಾಲನೆ ನೀಡಲಾಯಿತು. ನಂದಿಕೋಲು ಸಮಾಳ ಸೇರಿ ಸಕಲ ವಾದ್ಯಗೋಷ್ಠಿಗಳೊಂದಿಗೆ ಕೊಟ್ಟೂರೇಶ್ವರ ಉತ್ಸವಮೂರ್ತಿ ಮೆರವಣಿಗೆ ಹಾಗೂ ಗಂಗೆ ಪೂಜೆ ಮಾಡಲಾಯಿತು. ಅರ್ಚಕ ತಿಪ್ಪಯ್ಯಸ್ವಾಮಿ ಪೂಜೆ ಕೈಂಕರ್ಯಗಳನ್ನು ನೆರವೇರಿಸಿದರು.

ಗ್ರಾಮದ ಮುಖಂಡರಾದ ಅಕ್ಕಿ ಶಿವಕುಮಾರ, ಮಹಬಲೇಶ್ವರಯ್ಯ, ದೇವಯ್ಯ, ಗೌರಜ್ಜನವರ ಬಸವರಾಜಪ್ಪ, ಅಕ್ಕಿ ತೋಟೇಶ್, ಎಸ್.ಎಂ.ಶಿವಾನಂದಯ್ಯ, ಬಾಚಿನಳ್ಳಿ ಬಸವರಾಜ, ಆನೇಕಲ್ ಗುರುಬಸವರಾಜ, ಅಕ್ಕಿ ದೇವಪ್ಪ, ಕಾತ್ರಿಕಿ ಕೊಟ್ರೇಶ, ಆನೇಕಲ್ ವಿರುಪಾಕ್ಷಿ, ಮ್ಯಗಳಮನಿ ತೋಟಪ್ಪ, ಗೂಡ್ಲಾನೂರು ವಸಂತ, ಡಿ.ಎಂ.ಪ್ರವೀಣ ಇತರರಿದ್ದರು.

ಸ್ಟೂಡೆಂಟ್ ಕಾಲಂ

ನಮ್ಮ ಆರೋಗ್ಯಕ್ಕೆ ನಾವೇ ಹೊಣೆ

ಒಂದು ಸುಂದರವಾದ ಕಾಡು. ಆ ಕಾಡಿನಲ್ಲಿ ಒಂದು ದೊಡ್ಡ ನದಿ. ಆ ನದಿಯ ದಡದಲ್ಲಿ ಒಂದು ಬುಡಕಟ್ಟು ಸಮುದಾಯದ ಜನಗಳು ವಾಸಿಯಾಗುತಿದರು. ಆ ಸಮುದಾಯದಲ್ಲಿ ಹಲವಾರು ಕುಟುಂಬಗಳಿದ್ದವು. ಅವರಿಗೆ ಆ ಕಾಡು, ಮತ್ತೆ ಆ ನದಿ ಎಂದರೆ ಬಹಳ ಪ್ರೀತಿ. ಯಾರಾದರೂ ಆ ಕಾಡನ್ನು ನಾಶ ಮಾಡಲು ಬಂದರೆ ಅವರಿಗೆ ಸರಿಯಾದ ಬುದ್ಧಿ ಕಲಿಸುತಿದ್ದರು. ಆ ಸಮುದಾಯದಲ್ಲಿ ಒಂದು ಪುಟ್ಟ ಕುಟುಂಬವಿತ್ತು. ಕುಟುಂಬದಲ್ಲಿ ಉದಯ ಮತ್ತು ರಾಜೇಂದ್ರ ಎಂಬ ಇಬ್ಬರು ಅಣ್ಣ ತಮ್ಮಂದಿದ್ದರು. ಅವರಿಬ್ಬರೂ ಬಹಳ ಅನ್ಯೋನ್ಯವಾಗಿದ್ದರು. ಅವರಿಗೂ ಸಹ ಕಾಡು ಎಂದರೆ ಪ್ರಾಣ.

ಒಂದು ದಿನ ಹೀಗೆ ಇಬ್ಬರು ಮಾತನಾಡುತ್ತಾ ಕುಳಿತಿದ್ದರು. ಆಗ ರಾಜೇಂದ್ರ "ಅಣ್ಣ ನಗರಗಳಲ್ಲಿ ತುಂಬಾ ಚೆನ್ನಾಗಿ ಜನರು ವಾಸ ಮಾಡುತ್ತಾರೆ. ಅವರ ಜೀವನ ತುಂಬಾ ಅದ್ಭುತವಾಗಿರುತ್ತದೆ' ಎಂದನು. ಆಗ ಉದಯ "ಲೋ ತಮ್ಮ, ನಿನಗೆ ಇನ್ನೂ ನಗರದ ಹುಚ್ಚು ಬಿಟ್ಟಿಲ್ವಾ, ಯಾಕೋ ಬರಿ ನಗರ ನಗರ ಅಂತೀಯ. ಹೋಗು ಅಲ್ಲಿಯೇ ಇದ್ದು ಬಿಡು" ಎಂದನು. ಆಗ ರಾಜೇಂದ್ರ 'ಹೌದಲ್ವಾ ಅಣ್ಣ, ನಾವು ಈ ಕಾಡನ್ನು ಬಿಟ್ಟು ನಗರಕ್ಕೆ ಹೋಗಿ ಇರಬಹುದಲ್ವಾ' ಎಂದು ಹೇಳಿದನು. "ತಮ್ಮ ಒಂದು ದಿನ ನಿನ್ನ ನಾನು ನಗರಕ್ಕೆ ಕರ್ಕೊಂಡು ಹೋಗ್ತೀನಿ. ಅಲ್ಲಿ ನೀನು ಏನೇನು ಮಾಡ್ತೀಯಾ ಅಂತ ನೋಡ್ತೀನಿ. ಆಗ ನಿನಗೆ ಈ ಕಾಡೆ ಬೇಕು ಅನ್ಸುತ್ತೆ' ಎಂದನು. "ಅಣ್ಣ ನಿಜವಾಗ್ಲೂ ನನ್ನನ್ನು ನಗರಕ್ಕೆ ಕರ್ಕೊಂಡು ಹೋಗ್ತೀಯಾ? ಹಾಗಾದರೆ ನಾಳೆ ಹೋಗೋಣವಾ" ಎಂದನು ರಾಜೇಂದ್ರ. ಉದಯ ಒಪ್ಪಿಕೊಂಡು 'ಸರಿ ನಾಳೆ ನಗರಕ್ಕೆ ನಿನ್ನನ್ನು ಕರ್ಕೊಂಡು ಹೋಗ್ತೀನಿ' ಎಂದನು. ಅವರಿಬ್ಬರೂ ಮಾತನಾಡಿಕೊಂಡಂತೆ ಉದಯ ತನ್ನ ತಮ್ಮನನ್ನು ಮರುದಿನವೇ ನಗರಕ್ಕೆ ಕರೆದುಕೊಂಡು ಹೋದನು. ರಾಜೇಂದ್ರನಿಗಂತು ಬಹಳ ಸಂತೋಷವಾಗಿತ್ತು. ಮೊದಲ ಬಾರಿಗೆ ನಗರಕ್ಕೆ ಹೋಗುತ್ತಿದ್ದೇನೆ ಎಂದು ಇಬ್ಬರೂ ತಯಾರಾಗಿ ಹೊರಟರು.

ವೊದವೊದಲು ನಗರದ ಬಳಿ ಕಾಲಿಟ್ಟಂತೆ ವಾಹನಗಳಿಂದ ಬರುವಂತಹ ಹೊಗೆ, ಜನಗಳ ಗಲಾಟೆ, ವಾಹನಗಳ ಓಡಾಟದ ಶಬ್ದ ಮತ್ತು ತಿಂಡಿ ತಿನಿಸುಗಳ ಮೇಲೆ ನೊಣಗಳ ಹಾರಾಟ ಇದನ್ನೆಲ್ಲಾ ಕಣ್ಣಾರೆ ಕಂಡ ರಾಜೇಂದ್ರ 'ಅಯ್ಯೋ ದೇವರೇ ಇದೇನು? ನಗರ ಎಂದರೆ ತುಂಬಾ ಚೆನ್ನಾಗಿರುತ್ತೆ ಎಂದುಕೊಂಡಿದ್ದೆ' ಎಂದು ತನ್ನ ಮನಸ್ಸಿನಲ್ಲೇ ಗುನುಗುಟ್ಟಿದನು. ಇಬ್ಬರೂ ನಗರದ ಬೀದಿಗಳಲ್ಲಿ, ಗಲ್ಲಿಗಳಲ್ಲಿ ತಿರುಗಾಡಿದರು. ಸ್ವಲ್ಪ ಸಮಯದ ನಂತರ ರಾಜೇಂದ್ರನು 'ಅಣ್ಣ ನಾವು ನಮ್ಮ ಕಾಡಿಗೆ ವಾಪಸ್ ಹೋಗೋಣ' ಎಂದನು. ಆ ಮಾತಿಗೆ ಒಪ್ಪಿದ ಉದಯ "ಸರಿ ಹೋಗೋಣ" ಎಂದು ತಮ್ಮ ಕಾಡಿಗೆ ವಾಪಾಸು ಬಂದರು.

ಒಂದು ದಿನ ವಿಶಾಲವಾದ ನದಿಯ ದಡದಲ್ಲಿ ಕುಳಿತು ರಾಜೇಂದ್ರ ತನ್ನ ಅಣ್ಣ ಉದಯನಿಗೆ ಪ್ರಶ್ನೆ ಹಾಕುತ್ತ ಹೊರಟ. 'ಅಣ್ಣ ಆ ನಗರ ಏಕೆ ಅಷ್ಟೊಂದು ಹೊಗೆಯಿಂದ ತುಂಬಿಕೊಂಡಿದೆ? ಅಲ್ಲಿ ಪರಿಶುದ್ಧವಾದ ಗಾಳಿ ಇಲ್ಲವೇ?' ಎಂದು ಕೇಳಿದನು. ಅದಕ್ಕೆ ಉದಯ "ನೋಡು ತಮ್ಮ ಅದೊಂದು ದೊಡ್ಡ ನಗರ. ಆ ನಗರದಲ್ಲಿ ಸಾವಿರಾರು ಮನೆಗಳಿವೆ. ಅಲ್ಲಿ ಬಹಳಷ್ಟು ವಾಹನಗಳಿವೆ. ಆ ವಾಹನಗಳಿಂದ ಬರುವ ಹೊಗೆಯು ಶುದ್ಧವಾದ ಗಾಳಿಯಲ್ಲಿ ಸೇರಿ ಗಾಳಿಯನ್ನು ಕಲುಷಿತಗೊಳಿಸುತ್ತದೆ. ಅದಕ್ಕೆ ವಾಯು ಮಾಲಿನ್ಯ ಎನ್ನುವರು. ಅಂತಹ ಮಾಲಿನ್ಯದಿಂದ ಅನೇಕ ನಗರದಲ್ಲಿ ಜನರು ಮನೆಯನ್ನು ಬಿಟ್ಟು ಹೊರಗೆ ಬರುವುದಿಲ್ಲ. ಆ ಮಾಲಿನ್ಯಯುಕ್ತ ಗಾಳಿಯನ್ನು ಸೇವಿಸಿ ಹಲವಾರು ಜನರ ಜೀವನ ಹಾಳಾಗಿದೆ. ಇವರೆಲ್ಲಾ ನಮ್ಮಂತೆ ಶುದ್ಧವಾದ ಗಾಳಿ ಸೇವಿಸುವುದಿಲ್ಲ. ಹೊರಗಡೆಯಿಂದ ನೋಡೋಕೆ ಮಾತ್ರ ಚಂದ. ಆ ನಗರ ನೋಡಿದೆಯಾ? ವಾಹನಗಳು ಕಾರ್ಖಾನೆಗಳಿಂದ ಉಂಟಾಗುವ ಕರ್ಕಶ ಶಬ್ದ ಕೇಳಿದೆಯಾ? ಇದನ್ನು ಶಬ್ದ ಮಾಲಿನ್ಯ ಎಂದು ಕರೆಯುತ್ತಾರೆ" ಎಂದನು ಉದಯ.

'ನೋಡಿದೆ ಎಂತಹ ಗಲಾಟೆ ಅದು. ಯಪ್ಪಾ ನಾನಂತೂ ಇನ್ನೆಂದೂ ಆ ನಗರಕ್ಕೆ ಹೋಗೋದಿಲ್ಲ' ಎಂದನು ರಾಜೇಂದ್ರ. ಮುಂದುವರೆದು 'ಮತ್ತೆ ಅಣ್ಣ ಅಂಗಡಿಯಲ್ಲಿದ್ದ ತಿಂಡಿ ತಿನಿಸುಗಳನ್ನು ನೋಡಿದೆಯಾ, ಅದರ ಮೇಲೆ ನೊಣಗಳು ಯಾವತರ ಕುಳಿತಿದ್ದು ಎಷ್ಟೊಂದು ಕುಳಿತಿದ್ದು, ಆದರೂ ಜನರು ಅದನ್ನೇ ತಿನ್ನುತ್ತಿದ್ದರು. ಇಷ್ಟಪಡುತ್ತಿದ್ದರು'. "ಹೂಂ, ನೋಡಿದೆ ತಮ್ಮ. ಬೀದಿ ಬದಿಯಲ್ಲಿನ ತಿಂಡಿ–ತಿನಿಸುಗಳನ್ನು ತಿಂದು ಜನರು ತಮ್ಮ ಆರೋಗ್ಯವನ್ನು ಮಾಡಿಕೊಂಡಿದ್ದಾರೆ. ಅಲ್ಲಿದ್ದ ಆಹಾರ ಆರೋಗ್ಯಕ್ಕೆ ಒಳ್ಳೆಯದಲ್ಲ. ಹಣ್ಣು ಹಂಪಲುಗಳನ್ನು ತಿನ್ನುವ ಬದಲು ಈಗಿನ ಕಾಲದಲ್ಲಿ ಪಾನಿಪೂರಿ, ಗೋಬಿ, ಹೀಗೆ ಇತರೆ ಬೀದಿ ಬದಿಯ ತಿಂಡಿಗಳನ್ನು ತಿನ್ನುತ್ತಾರೆ. ಇಂತಹ ಆಹಾರಗಳು ನಮ್ಮ ಆರೋಗ್ಯಕ್ಕೆ ಒಳ್ಳೆಯದಲ್ಲ. ಆರೋಗ್ಯ ಎಂಬುದು ದೇವರು ಕೊಟ್ಟ ವರವಿದ್ದಂತೆ. ಅದನ್ನು ನಾವು ನಮ್ಮ ಕೈಯಿಂದಲೇ ಹಾಳು ಮಾಡಿಕೊಳ್ಳುತ್ತಿದ್ದೇವೆ.

ಆರೋಗ್ಯ ಎಂದರೆ ಮಹಾಭಾಗ್ಯವಿದ್ದಂತೆ. ಏನಾದರೂ ಕಳೆದುಕೊಂಡರೆ ಮತ್ತೆ ಪಡೆದುಕೊಳ್ಳಬಹುದು. ಅದು ಹಣವಾದರೂ ಸರಿ, ತಿಂಡಿ ತಿನಿಸುಗಳಾದರು ಸರಿ, ಆದರೆ ಆರೋಗ್ಯ ಕಳೆದುಕೊಂಡರೆ ಮತ್ತೆ ನಾವು ಮೊದಲಿನಂತೆ ಇರೋದಕ್ಕೆ ಆಗಲ್ಲ. ದಯವಿಟ್ಟು ಯಾರೂ ಬೀದಿ ಬದಿಯ ತಿಂಡಿಗಳನ್ನು ತಿನ್ನಬೇಡಿ. ನಮ್ಮ ಆರೋಗ್ಯವನ್ನು ನಾವೇ ಕಾಪಾಡಿಕೊಳ್ಳಬೇಕು. ಸ್ವಚ್ಛವಾದ ಆಹಾರವನ್ನು ಸೇವಿಸಬೇಕು. ನಮ್ಮ ಆರೋಗ್ಯಕ್ಕೆ ನಾವೇ ಹೊಣೆ. ಹಾಗೆಯೇ ನಮ್ಮ ಪರಿಸರ ತುಂಬಾ ನಾಶವಾಗುತ್ತಿದೆ. ಅದು ನಮ್ಮ ನಿಮ್ಮೆಲ್ಲರ ಸಂಪತ್ತು. ಅದನ್ನು ಕೂಡ ರಕ್ಷಿಸಲು ಪಣತೊಡೋಣ ಎನ್ನುತ್ತಾ ಇಬ್ಬರೂ ಕಾಡಿನ ತಮ್ಮ ಮನೆಯತ್ತ ನಡೆದರು.

ಕೆ. ಅನು. 10ನೇ ತರಗತಿ.
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ನಿಮ್ಮ ಶಿಕ್ಷಣದಲ್ಲಿ ಈ ಕೆಲವು ಆಸೆಯಗಳಿಂದ ದಾಖಲಿಸಲು ಬಂದಿದ್ದೇವೆ

ಪಾಲಕರು ವಿನಮ್ರ ಮನವಿ ಮಾಡಿದ್ದೇನು?

ಇತ್ತಿಚಿಗೆ ನಡೆಯುತ್ತಿರುವ ವಿದ್ಯಮಾನಗಳಲ್ಲಿ ಉನ್ನತ ಶಿಕ್ಷಣ ಪಡೆದು , ಕೈ ತುಂಬ ಸಂಬಳ ಪಡೆಯುವ ಹಂಬಲ, ಅಲ್ಲಿ ವಯಕ್ತಿಕ ಜೀವನದ ಬಗ್ಗೆ ಗಮನ ಕೊಡದೆ, ಜೀವನದಲ್ಲಿ ಯಾಂತ್ರಿಕ ಜೀವನಕ್ಕೆ ಬಲಿಯಾಗಿ ಕಂಪನಿ ಹಾಗೂ ಉನ್ನತ ಹುದ್ದೆಗಳಲ್ಲಿ ಸೇವೆ ಮಾಡುತ್ತಿದ್ದು, ಕುಟುಂಬಗಳ ಖಾಸಗಿ ಜೀವನಕ್ಕೂ ಸಮಯ ಕೊಡದೆ, ಹಬ್ಬ ಹರಿದಿಗಳಲ್ಲಿ ಕಾರ್ಯಕ್ರಮ ಸಡಗರ ಸಂಭಮಗಳಲ್ಲಿ ಸಮಯದ ಅಭಾವ ಇದೆ ಎಂದು ತಪ್ಪಿಸಿಕೊಳ್ಳುವವರು,ರಜೆಯ ನೆಪ ಹೇಳಿ ಜವಾಬ್ದಾರಿಗಳಿಂದ ತಪ್ಪಿಸಿಕೊಳ್ಳುವ ಯುವಕರು ನಿಜವಾಗಲೂ ನೆಮ್ಮದಿಯ ಬದುಕು ನಡೆಸುತ್ತಿದ್ದಾರೆ ಎನ್ನುವ ಯಾವುದೆ ಲಕ್ಷಣಗಳು ಕಾಣುತ್ತಿಲ್ಲ .

ಪಾಲಕಾರದ ನಾವು ಎಲ್ಲಿ ಎಡವುತ್ತಿದ್ದೇವೆ ? ಮಕ್ಕಳ ಈ ಪರಿಸ್ಥಿತಿಗೆ ಎನು ಕಾರಣ ಎನ್ನುವ ಯೊಚನೆಯಲ್ಲಿ ಕುಳಿತ್ತಿರುವಾಗ, ಖಾನಾಪುರದ ಶಿಕ್ಷಕಿಯೊಬ್ಬರು ತಮ್ಮ ಪುಟ್ಟ ಮಗುವಿನೊಂದಿಗೆ ಶಿಕ್ಷಕಿಯ ಬಳಿಗೆ ಬಂದು, ಮೇಡಂ ನನ್ನ ಮಗುವಿನ ಅಡ್ಮಿಷನ್ ನಿಮ್ಮ ಶಾಲೆಯಲ್ಲಿ ಮಾಡಿಸಲು ಬಂದಿದ್ದಿವಿ, ಆದರೆ ಪಾಲಕರಾದ ನಾವು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ನಿಮ್ಮ ಶಿಕ್ಷಣದಲ್ಲಿ ಈ ಕೆಲವು ಆಸೆಯಗಳಿಂದ ದಾಖಲಿಸಲು ಬಂದಿದ್ದೇವೆ ಇದು ನನ್ನೊಂದಿಗೆ ಹುಟ್ಟಿಕೊಂಡ ಕನಸುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಪ್ರಯತ್ನವಷ್ಟೇ.. ದಯವಿಟ್ಟು ನನ್ನ ಮಗನಿಗೆ ಅಂಕಗಳ ಹುಚ್ಚು ಹಿಡಿಸಬೇಡಿ.

"ಒಂದು ಉನ್ನತ ಹುದ್ದೆ ಹಿಡಿಯುವುದಕ್ಕಾಗಿ ನೀನು ಓದಲಿಕ್ಕೆ ಬಂದಿದ್ದೀಯ" ಎಂದು ದಯವಿಟ್ಟು ಹೇಳಿಕೊಡಬೇಡಿ.

ಕೆಲಸ ಯಾವುದೇ ಇರಲಿ ಅದನ್ನು ಪ್ರಾಮಾಣಿಕವಾಗಿ ಖುಷಿಯಿಂದ, ಹೆಮ್ಮೆಯಿಂದ ನಿಷ್ಠೆಯಿಂದ ಮಾಡುವುದೇ ಶ್ರೇಷ್ಠ ಎಂಬುದನ್ನು ಹೇಳಿಕೊಡಿ.

ಅವನಿಗೆ ಉತ್ತಮ ಪುಸ್ತಕಗಳ ಹುಚ್ಚು ಹಿಡಿಯುವಂತೆ ಮಾಡಿ, ಶಾಲೆಯ ಪುಸ್ತಕಗಳಷ್ಟೇ ನಮ್ಮ ಮಿತಿ ಎಂಬ ಭ್ರಮೆ ಹುಟ್ಟಿಸಬೇಡಿ. ಭಯದಲ್ಲಿ ನಡುಗುವ ಬದಲು ಖುಷಿಯಿಂದ ಶಿಸ್ತಿಗೆ ಒಡ್ಡಿ ಕೊಳ್ಳುವುದನ್ನು ಹೇಳಿಕೊಡಿ.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ
Scan For Digital Colourful
HAMPI TIMES E-paper

ಅವನಿಗೆ ಬದುಕು ಕಲಿಸಿ, ಕಷ್ಟಗಳಲ್ಲಿ ಓಡಿ ಹೋಗುವ, ಸುಖ ಬಂದಾಗ ಕುಣಿದಾಡುವುದರ ಬದಲು ಸಮಚಿತ್ತತೆಯಿಂದ ಇರುವು ದನ್ನು ಹೇಳಿಕೊಡಿ, ನೋವಿನಲ್ಲೂ ನಗುವುದನ್ನು ಕಲಿಸಿ. ಎಂದಿಗೂ ಜಾತಿಯ ಬೀಜ ಮೊಳೆಯದಂತೆ ನೋಡಿ ಕೊಳ್ಳಿ.

ಸಾಧ್ಯವಾದರೆ ಅವನಿಗೆ ಪ್ರಕೃತಿಯಲ್ಲಿ ಕಳೆದು ಹೋಗುವುನ್ನು ಹೇಳಿಕೊಡಿ, ಸುರಿಯುವ ಮಳೆಯಲ್ಲಿ ನೆನೆಯುವ, ಚಿಟ್ಟೆಗಳ ಚಂದವನ್ನು ಆನಂದಿಸುವ, ಹಾರುವ ಪಕ್ಷಿಗಳನ್ನು ಎಣಿಸುವ, ಸಾಲಾಗಿ ನಡೆದುಕೊಂಡು ಹೋಗುವ ಇರುವೆಗಳನ್ನು ಹಿಂಬಾಲಿಸುವ, ಬೀಜ ಮೊಳೆಯುವುದನ್ನು, ಕಾಯುವ ಕುತೂಹಲ ತುಂಬಿ.

ಗಿಡ ನೆಡಲು ಪಣತೊಡುವ ಮನಸ್ಸು ಬರುವಂತೆ ಮಾಡಿ.ಬದುಕಿನಲ್ಲಿ ಮೋಸ ಮಾಡಿ ಗೆಲ್ಲುವುದಕ್ಕಿಂತ, ಪ್ರಾಮಾಣಿಕವಾಗಿ ಸೋಲುವುದನ್ನು ಕಲಿಸಿ. ಅನ್ಯಾಯ ಮಾಡಿ ಗಳಿಸುವುದಕ್ಕಿಂತ, ಒಬ್ಬರಿಗೆ ನೋವು ಮಾಡಿ ಪಡೆಯುವುದಕ್ಕಿಂತ ಪ್ರಾಮಾಣಿಕತೆಯಿಂದ ಸಾಧಿಸಲು ತಿಳಿಸಿ ಜೀವನ ತುಂಬಾ ಸುಂದರವಾಗಿದೆ ಎಂಬುದನ್ನು ಹೇಳಿಕೊಡಿ. ಪ್ರತಿ ಕ್ಷಣದಲ್ಲೂ ಖುಷಿಯಿದೆ ಎಂಬುದನ್ನು ಅವನು ತಿಳಿಯಲಿ.

ಹೆಣ್ಣನ್ನು ಗೌರವಿಸುವ, ದೀನ ದುರ್ಬಲರನ್ನು, ವಯೋ ವೃದ್ಧರನ್ನು ನೋಡಿ ಮರುಗುವ ಗುಣ ಕಲಿಸಿ, ಕಷ್ಟದಲ್ಲಿ, ನೋವಿನಲ್ಲಿರುವವರ ಸಹಾಯಕ್ಕೆ ಧಾವಿಸುವ ಛಲ ಬರುವಂತೆ ಮಾಡಿ.

ಫೇಲಾದರೂ ಪರವಾಗಿಲ್ಲ ಬದುಕಿನಲ್ಲಿ ಖುಷಿಯಾಗಿ ದುಡಿದು ಜೀವಿಸುವುದನ್ನು ಕಲಿಸಿ. ನಾನು ಅವನನ್ನು ಒಬ್ಬ ಡಾಕ್ಟರ್, ಎಂಜಿನಿಯರ್, ಉನ್ನತ ಅಧಿಕಾರಿಗಿಂತ ಒಳ್ಳೆಯ ಮನುಷ್ಯನಾಗಿ ಬಾಳುವುದನ್ನು ಕಾಣ ಬಯಸುತ್ತೇನೆ. ಅವನಿಗೆ ಇಂಥ ಗುಣಗಳನ್ನು ರೂಢಿಸಿದರೆ ನಾನು ನಿಮಗೆ ಋಣಿ. ಧನ್ಯವಾದಗಳು.. ಎನ್ನುವ ಪಾಲಕರು ನುಡಿಗಳಾಗಿವೆ.

ನಿಜವಾಗಲೂ ನಾವು ಇವುಗಳ ಬಗ್ಗೆ ಗಮನ ಕೊಡದೆ ದೊಡ್ಡ ಶಿಕ್ಷಣ ಸಂಸ್ಥೆ, ಹಾಗೂ ರ್ಯಾಂಕಿಂಗ್ ಗೀಳು, ಆ ಮಗುವಿನ ಮೇಲೆ ಬೀರುವ ಪರಿಣಾಮ ಏನು ಎನ್ನುವತ್ತ ಗಮನ ಹರಿಸಬೇಕಿದೆ.

ಆಂತರಿಕ ದುರ್ಗುಣಗಳೇ ಬೆಳವಣಿಗೆಗೆ ಮಾರಕ

ರಾಮಾಯಣ, ಮಹಾಭಾರತ, ಪುರಾಣ ಇತಿಹಾಸ ಕಾಲದಿಂದ ಅವಲೋಕಿಸಿದಾಗ ತಪ್ಪು ಅಥವಾ ಅಪರಾಧಗಳು ಘಟಿಸಿದ ಮತ್ತು ಅವುಗಳಿಗೆ ಕ್ಷಮೆ, ಪಶ್ಚಾತ್ತಾಪ, ಶಿಕ್ಷೆ, ಶಾಪ ಕೊಡುವುದು, ಜತೆಗೆ ಶಾಪ ವಿಮೋಚನೆ. ಅಂದರೆ, ಶಾಪ ಪರಿಹಾರ ಎಲ್ಲವೂ ಕಂಡುಬರುತ್ತವೆ.

ಯಾರು ಅವಗುಣಗಳ ದಾಸನಾಗಿ ಮಾಯೆಯಿಂದ ಆವರಿಸಿದ ತಾತ್ಕಾಲಿಕ ಸುಖ ಸಂತೋಷವನ್ನು ಅನುಭವಿಸುತ್ತ 'ನಾನೇ ಪರಮ ಸುಖಿ' ಎನ್ನುವ ಗುಂಗಿನಲ್ಲಿರುತ್ತಾರೋ ಅವರಿಗೆ, ಇಂತಹ ಸಮಯ ದಲ್ಲಿ ತಾನು ಎಸಗಿದ ತಪ್ಪು ಅಥವಾ ಪಾಪ ಕೃತ್ಯಗಳು ಅವರ ಕಲ್ಪನೆಗೆ ಬರುವುದೇ ಇಲ್ಲ. ಆದರೆ ಅವರ ಆ ಅವಗುಣಗಳೇ ಅವರಿಗೆ ಶತ್ರು ಆಗುತ್ತವೆ ಎಂಬ ಪರಿಭಾಸವೂ ಅವರ ಕಲ್ಪನೆಗೆ ಬರುವುದಿಲ್ಲ. ಇಂತಹ ಅದೆಷ್ಟೋ ಉದಾಹರಣೆಗಳು ದೃಷ್ಟಾಂತ ಕಥೆಗಳಲ್ಲೂ ಕೇಳಿದ್ದೇವೆ. ಆದರೆ ಈ ತಪ್ಪುಗಳು, ಪ್ರಮಾದಗಳು, ಮಹಾ ಪಾಪಕೃತ್ಯಗಳು ಸಂಭವಿಸಲು ಮೂಲ ಕಾರಣ ನಮ್ಮ ಮನಸ್ಸು ಮತ್ತು ಇಂದ್ರೀಯಗಳ ಹತೋಟಿ ಇಲ್ಲದಿರುವುದೇ ಕಾರಣ ಎಂದು ಗೀತೋ ಪದೇಶ ದಲ್ಲಿದೆ.(6/6)

ಬಂಧುರಾತ್ಮಾತ್ಮನಸ್ತಸ್ಯ
ಯೇನಾತ್ಮೈವಾತ್ಮನಾ ಜಿತಃ ಟ
ಅನಾತ್ಮನಸ್ತು ಶತ್ರುತ್ವೇ
ವರ್ತೇತಾತ್ಮೈವ ಶತ್ರುವತ್.ಟಟ

ಯಾರು ತಮ್ಮಲ್ಲಿರುವ ಮನಸ್ಸು, ಇಂದ್ರೀಯಗಳನ್ನು ಗೆದ್ದಿರುವರೋ ಅವರು ತಮಗೆ ತಾವೇ ಮಿತ್ರರಾಗಿರುತ್ತಾರೆ. ಮತ್ತು ಯಾರು ಅವುಗಳನ್ನು ಜಯಿಸದೇ ಅವುಗಳ ದಾಸರಾಗುವರೋ ಅವರು ತಮಗೆ ತಾವೇ ಶತ್ರುವಾಗಿರುತ್ತಾರೆ.

ಲಕುಮಿಸುತ ಸಾರವಾಡ
ಹೊಸಪೇಟೆ
Scan For Digital Colourful
HAMPI TIMES E-paper

ಬಾಹ್ಯ ನೋಟಕ್ಕೆ ಶ್ರೀಮಂತರು, ಗೌರವಾನ್ವಿ ತರು, ಪ್ರಭಾವ ಶಾಲಿಗಳು ಮತ್ತು ಐಷಾರಾಮಿ ಜೀವನ ಸಾಗಿಸುವವರು, ಅಥವಾ ಬಡವ, ವ್ಯಾಪಾರಿ ಯಾರೇ ಆಗಿದ್ದರೂ ಅಂಥವರ ಮನಸ್ಸು ಒಂದು ವೇಳೆ ಖಿನ್ನತೆ, ದ್ವೇಷ, ಆವೇಗ, ಸಿಟ್ಟು, ದುಡುಕು ನಿರ್ಧಾರ ಅಥವಾ ಕೆಟ್ಟ ಆಲೋಚನೆಯಿಂದ ಕೂಡಿದ್ದರೇ, ಅವರಿಗೆ ಹೊರಗಿನ ವೈರಿಗಳಿಗಿಂತ ಅವರ ಆಂತರಿಕ ದುರ್ಗುಣಗಳೇ ಶತ್ರುವಾಗಿ ಪರಿಣಮಿಸುತ್ತವೆ. ಇಂಥಹ ಸ್ವಭಾವದವರಿಂದ ಪಾಪ ಕೃತ್ಯಗಳು ಜರುಗುತ್ತವೆ.

ಪ್ರಸ್ತುತ ಪ್ರಪಂಚದಲ್ಲಿ ಮನುಷ್ಯ ಸಣ್ಣ ಪುಟ್ಟ ತಪ್ಪುಗಳು ಅಥವಾ ಕ್ಷಮಿಸಲು ಯೋಗ್ಯವಾದ ಪ್ರಮಾದಗಳನ್ನು ಎಸಗಿದ್ದರೆ, ಹಿರಿಯರು ಅಥವಾ ಸಮಾಜದ ಮುಖಂಡರು ತಿಳಿ ಹೇಳಿ, ಕ್ಷಮಿಸಿ, ಸರಿಯಾದ ದಾರಿಗೆ ತರುವ ಕಾರ್ಯ ಕೈಗೊಂಡು, ತಿದ್ದಿಕೊಂಡು ಬದುಕಲು ಅವಕಾಶ ಮಾಡಿಕೊಡುವ ವಾಡಿಕೆ. ಹಾಗಾಗಿ ದ್ವೇಷ, ಆಸೆ, ಅಸೂಯೆ, ಮತ್ಸರ, ವೈರತ್ವ, ದುಶ್ಚಟಗಳಂತಹ ಎಲ್ಲ ದುರ್ಗುಣಗಳನ್ನು ತ್ಯಜಿಸಿ, ಪ್ರಾಮಾಣಿಕವಾಗಿ ಸಮಾಜದಲ್ಲಿ ಬದಲಾಗಿ ತೋರಿಸುವ ಮತ್ತು ಅಜ್ಞಾನವನ್ನು ಅಳಿಸುವ ಅವಕಾಶ ಇರುತ್ತದೆ. ಅಜ್ಞಾನದಿಂದ ಪಾಪ ಕೃತ್ಯಗಳನ್ನೆಸಗಿ ಪಶ್ಚಾತ್ತಾಪ ಹೊಂದಿ, ಮನಸ್ಸು ಬದಲಾಯಿಸಿ, ವೈರಾಗ್ಯ ಮನೋಭಾವನೆಯಿಂದ ಹೊಸ ಬದುಕು ಕಟ್ಟಿಕೊಳ್ಳಲು ಜ್ಞಾನ ಸಂಪಾದನೆ ಅತೀ ಮುಖ್ಯ.

ಅಪಿ ಚೇದಸಿ ಪಾಪೇಭ್ಯಃ
ಸರ್ವೇಭ್ಯಃ ಪಾಪಕೃತ್ತಮಃ ಟ
ಸರ್ವಂ ಜ್ಞಾನಪ್ಲವೇನೈವ
ವೃಜಿನಂ ಸಂತರಿಷ್ಯಸಿ ಟಟ

ಬೇರೆ ಎಲ್ಲ ಪಾಪಗಳಿಗಿಂತ, ಹೆಚ್ಚು ಪಾಪಗಳನ್ನು ಮಾಡುವವನಾಗಿದ್ದರೂ ಜ್ಞಾನರೂಪಿ ಎಂಬ ದೋಣಿಯ ಮುಖಾಂತರ ತನ್ನ ಸಂಪೂರ್ಣ ಪಾಪ ಸಮುದ್ರವನ್ನು ಖಂಡಿತವಾಗಿಯೂ ದಾಟ ಬಹುದು ಎಂದು ಶ್ರೀಕೃಷ್ಣನು ಗೀತೆಯಲ್ಲಿ (4/36)ಉಪದೇಶಿಸಿದ್ದಾನೆ. ದೈವತ್ವ ಭಾವನೆಯಿಂದ ತನ್ನ ಬದಲಾದ ಅರಿವಿನ ಶಕ್ತಿ, ಜ್ಞಾನದಿಂದ ಮನಸ್ಸು ಮತ್ತು ಇಂದ್ರೀಯಗಳನ್ನು ಹತೋಟಿಯಲ್ಲಿಟ್ಟಕೊಂಡು ಸತ್ಕರ್ಮದೊಂದಿಗೆ ಅತ್ಯಂತ ತಾಳ್ಮೆಯಿಂದ, ಹೊಸ ಮನುಷ್ಯನಾಗಿ ಹೊಸ ಬದುಕು ಕಟ್ಟಿಕೊಂಡು ಮಾದರಿಯಾಗಿ ಜೀವನ ಸಾಗಿಸಿದರೆ, ದೇವರು ಖಂಡಿತಾ ಜ್ಞಾನ ಮಾರ್ಗ ತೋರಿಸುತ್ತಾನೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor

ಕವಿ ಮನಸು

ಕರಡಿ ಕುಣಿತ

ಕಥೆಯು ಹೇಳಿಕೊಂಡು ಅಂಗಳದಾಗ
ಕರಡಿ ಕುಣಿತಾವ
ಕರಡಿ ಕುಣಿತಾದ ಪ್ರೀತಿ ಬದುಕಲಿ
ತಿಳಿಬೇಕು ಹಲವು ಲೋಕ

ಹಸಿರು ಮರದಲಿ ನೆರಳು ಇಲ್ಲದೆ
ಒಣಗ್ಯಾವ ಹೂವು ಬಳ್ಳಿ
ಹೆಸರು ಇಲ್ಲದ ಬಾವಿ ಬಿಸಿಲು ಕಾಣದೆ
ಚಿಗುರ್ಯಾವೆ ಸೀಮೆ ಕಳ್ಳಿ

ಮೂಡಣದ ಹಕ್ಕಿ ಪಡುವಣದ ಕಡೆಗೆ
ಹಾರ್ಯಾವ ಕಡಲು ದಾಟಿ ಪಡುವಣದ
ಗಾಳಿ ಮೂಡಣಕೆ ಬೀಸಿ
ಮರಿಗ್ಯಾವ ಗೂಡಹಕ್ಕಿ

ಕಲ್ಲಿನ ಕೋಳಿ ದಿಲ್ಲಿಯ ನೋಡಿ ಮಾಡ್ಯಾವ
ಡೊಂಬರಾಟ
ಕಳ್ಳಿ ಸಾಲಲಿ ಹಳ್ಳಿ ರಸ್ತೆಗಳು ಹಳ್ಳವ
ದಾಟುತಾವ

ಹಸನಾದ ಆಸನಕ್ಕೆ ಬೀಸಿಣಿಕೆ ಬೀಸಿ
ಕಲ್ಲುಗಳೇ ಬೆವತಾವ
ಶಾಸನದ ಕಲ್ಲುಗಳು ಈಶನ ಹೆಸರೇಳಿ
ಮೌನ ತಾಳು ತಾವ

ಮಜ್ಜಿಗೆ ಕಡಗೋಲು ಅಜ್ಜಿಯ ಕೈಯ ತಪ್ಪಿ
ಹೊಂಟಾವ ಹೊರಗೆ ದುಡಿಕಿ
ಬಣ್ಣದ ಮನೆಯಲಿ ಒರಳು ಒನಕೆಗಳು
ನಕ್ಕಾವ ಕೈ ಕುಲುಕಿ

ಮುಗಿಲಿಗೆ ಹೆಗಲು ಕೊಡುವ ಕಲ್ಲುಗಳು
ಸೊರಗಿ ನಿಂತಾವ
ಬೀಸುವ ಕಲ್ಲು ಬೀಸದೆ ನಿಂತು ನಿಟ್ಟುಸಿರು
ಬಿಡುತ್ತಾವ.

– ಜಿ ಯರಿಸ್ವಾಮಿ ಸಂಕ್ಲಾಪುರ

ಹಂಪಿ ಟೈಮ್ಸ್ ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–3 ರಲ್ಲಿ ಭಾಗವಹಿಸಿ ಆಯಾ ಶಾಲೆಗೆ ಅತ್ಯುತ್ತಮ ಚಿತ್ರ ಬಿಡಿಸಿ ಆಯ್ಕೆಯಾದ ವಿದ್ಯಾರ್ಥಿಗಳ ವಿವರ

ದಿ ಬೆಸ್ಟ್ ವಿಜ್ಞಾನ ಚಿತ್ರ ಬಿಡಿಸಿದ ವಿದ್ಯಾರ್ಥಿಗಳಿಗೆ ಅಭಿನಂದನೆಗಳು

■ ಹಂಪಿ ಟೈಮ್ಸ್ ಹೊಸಪೇಟೆ

ಈ ಬಾರಿ ಫಲಿತಾಂಶ ನಮ್ಮದೆ ಎಂಬ ಘೋಷವಾಕ್ಯದಡಿ ಹಂಪಿ ಟೈಮ್ಸ್ ಬಳಗ ನಿರಂತರವಾಗಿ ಪರೀಕ್ಷಾ ಸಿದ್ಧತೆ ಹಾಗೂ ಹೆಚ್ಚಿನ ಅಂಕಗಳಿಸಲು ಅನುಕೂಲವಾಗುವಂತೆ ಶೈಕ್ಷಣಿಕ ವರ್ಷದ ಆರಂಭದಿಂದಲೂ ಪ್ರಶ್ನೋತ್ತರಗಳನ್ನು ದಿನಕ್ಕೊಂದು ವಿಷಯದಂತೆ ಪ್ರಕಟಿಸುತ್ತಾ ಬಂದಿದೆ. ಎಸ್ಸೆಸ್ಸೆಲ್ಸಿ ಪರೀಕ್ಷೆ ಸಮೀಪಿಸುತ್ತಿರುವುದರಿಂದ ಮಕ್ಕಳಲ್ಲಿ ಪರೀಕ್ಷಾ ಭಯ ತೊಲಗಿಸಿ, ಆತ್ಮವಿಶ್ವಾಸ ಹೆಚ್ಚಿಸುವ ನಿಟ್ಟಿನಲ್ಲಿ ಮಕ್ಕಳಿಗೆ ಪ್ರತಿ ಶುಕ್ರವಾರ ವಾರ್ಷಿಕ ಪರೀಕ್ಷೆಯಲ್ಲಿ ಪರೀಕ್ಷೆಯಲ್ಲಿ ಬರಬಹುದಾದ ಸಂಭವನೀಯ ವಿಜ್ಞಾನ ಚಿತ್ರಗಳನ್ನು ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿದೆ. ವಿದ್ಯಾರ್ಥಿಗಳು ಚಿತ್ರಸ್ಪರ್ಧೆಯಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ. ಶಿಕ್ಷಕರು ಸಮರ್ಪಕವಾಗಿ ತೊಡಗಿಸಿಕೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮತ್ತು ಡಿಡಿಪಿಐ ಸೇರಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ ಹರ್ಷ ವ್ಯಕ್ತಪಡಿಸಿದ್ದಾರೆ. ಅವಕಾಶ ವಂಚಿತ ವಿದ್ಯಾರ್ಥಿಗಳು ಮುಂದಿನ ಶುಕ್ರವಾರಗಳಲ್ಲೂ ನಿಯಮಾನುಸಾರ ಭಾಗವಹಿಸಿ, ಅತ್ಯುತ್ತಮ ಚಿತ್ರ ಕಳಿಸಬಹುದಾಗಿದೆ.

ಈ ವಾರದ (20–12–2024)
ಚಿತ್ರ ಬಿಡಿಸುವ ಸ್ಪರ್ಧೆ – ವಿಷಯ:
ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತು ವಿನ ಚೂರುಗಳ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆ ಮಾಡುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ?

ಹೊಸಪೇಟೆ ತಾಲೂಕು

1. ಕೆ.ಆರ್ ದಿಶಾ
ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆ
ಮರಿಯಮ್ಮನಹಳ್ಳಿ
ಶಿಕ್ಷಕರು–ಜಾಕಿರ್ ಹುಸೇನ್

2. ಶ್ರೀನಿಧಿ
ಜೆಸ್ಸೀಸ್ ಪ್ರೌಢಶಾಲೆ
ಎನ್.ಸಿ ಕಾಲೋನಿ, ಹೊಸಪೇಟೆ
ಶಿಕ್ಷಕರು–ಶೋಭಾ ಕೆ ಎಸ್

3. ಪೈರೋಜ್
ಸ.ಫ.ಪೂ ಕಾಲೇಜು, ಕಮಲಾಪುರ
ಶಿಕ್ಷಕರು– ಆಸ್ಮಾ ತರನ್ನುಂ/ನೇಮ್ಯನಾಯ್ಕ

4. ಪ್ರಶಾಂತ ಕುಮಾರ
GHS, ಗುಂಡ
ಶಿಕ್ಷಕರು–ನಾರಾಯಣ ಕೆ

5. ಹೆಚ್. ಅಂಕಿತ
ಗ್ರಾಮಾಂತರ ಅನುದಾನಿತ ಪ್ರೌಢಶಾಲೆ, ಪಾಪಿನಾಯಕನಹಳ್ಳಿ
ಶಿಕ್ಷಕರು–ನಜೀರ್ ಪಾಟೀಲ್

6. ಕೆ. ಉಮ
ಭಾರತರತ್ನ ರಾಜೀವ್ ಗಾಂಧಿ ಪ್ರೌಢಶಾಲೆ, ಜಿ ನಾಗಲಾಪುರ
ಶಿಕ್ಷಕರು–ಚನ್ನಬಸಪ್ಪ ಕೆ.ಡಿ

7. . ಇಬ್ಬನಿ ಜೈನ್
ಸ್ಕಯೋರ್ ವ್ಯಾಸಪುರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ, ವ್ಯಾಸನ ಕೇರಿ
ಶಿಕ್ಷಕರು–ನಂದಕುಮಾರ/ವಾಣಿ

8. ಬಿ. ವಿದ್ಯಾವತಿ
GHS, ಅನಂತಶಯನ ಗುಡಿ
ಶಿಕ್ಷಕರು–ವಿಜಯಲಕ್ಷ್ಮಿ

9. ಸ್ಫೂರ್ತಿ ಹೆಚ್
GHS, , ಬುಕ್ಕಸಾಗರ
ಶಿಕ್ಷಕರು– ಮಹಮ್ಮದ್ ಮನ್ಸೂರ್ ಅಲಿ

10. ಯು. ಪಲ್ಲವಿ
GHS, ಬಾಲಕಿಯರ ಪ್ರೌಢಶಾಲೆ (EXMP)
ಹೊಸಪೇಟೆ
ಶಿಕ್ಷಕರು–ರುಕ್ಸಾನ

11. ಆರ್. ರುಹೀನ
ಸ.ಸಂ.ಪ.ಪೂ.ಕಾಲೇಜು
ಚಿತ್ತವಾಡಗಿ ಹೊಸಪೇಟೆ
ಶಿಕ್ಷಕರು–ಎ ಎಂ ವರಲಕ್ಷ್ಮಿ

12. ಶ್ರೀನಿಧಿ
ಜೆಸ್ಸೀಸ್ ಪ್ರೌಢಶಾಲೆ
ಎನ್.ಸಿ ಕಾಲೋನಿ
ಹೊಸಪೇಟೆ
ಶಿಕ್ಷಕರು–ಶೋಭಾ ಕೆ ಎಸ್

13. ಪ್ರಿಯಾಂಕ ಡಿ
ಬಾಲಕಿಯರ ಸಂ.ಪ. ಪೂ. ಕಾಲೇಜು
ಅಮರಾವತಿ_ಹೊಸಪೇಟೆ
ಶಿಕ್ಷಕರು–ಶಿವಮ್ಮ

14. ಯು. ಪಲ್ಲವಿ
ಸ.ಬಾ.ಪ್ರೌ.ಶಾಲೆ, ಹೊಸಪೇಟೆ

15. ಮೊಹಮ್ಮದ್ ಅಜೀಮ್
ಉಉಖ, ಡಣಾಪುರ
ಶಿಕ್ಷಕರು– ಶ್ರೀಲತ

16. ಕೆ. ತೇಜಶ್ವಿನಿ
ರಾಣಿಚನ್ನಮ್ಮ ಪ್ರೌಢಶಾಲೆ
ಹೊಸಪೇಟೆ
ಶಿಕ್ಷಕರು– ಸಿಂಧುಜಾ

17. ಅಮೃತ
ಕೆ.ಜಿ.ಬಿ.ವಿ ಕಮಲಾಪುರ
ಶಿಕ್ಷಕರು– ಗಾಯಿತ್ರಿ ಟಿ

18. ಮಣಿಕಂಠ ಎಂ
ಸರ್ದಾರ್ ಪಾಟೀಲ್ ಸ.ಪ್ರೌ ಶಾಲೆ
ಹೊಸಪೇಟೆ
ಶಿಕ್ಷಕರು–

19. ಅಕ್ಷತಾ ಚೌಹಾನ್
ಸ.ಬಾ.ಪ್ರೌ ಶಾಲೆ, ಕಮಲಾಪುರ
ಶಿಕ್ಷಕರು– ಅನಿಲ್ ಕುಮಾರ್ ಕೆ

20. ಬಿ. ಹನುಮಂತ
ವಿ.ಎಸ್.ಬಿ.ಸಿ ಪ್ರೌ ಶಾಲೆ, ಹೊಸಪೇಟೆ
ಶಿಕ್ಷಕರು– ಹೆಚ್. ಶಕುಂತಲ

21. ಅಮೂಲ್ಯ
ಪಿ.ವಿ.ಎಸ್.ಬಿ.ಸಿ.ಪ್ರೌ. ಶಾಲೆ, ಹೊಸಪೇಟೆ
ಶಿಕ್ಷಕರು– ಜಯಪ್ರಭು

ಹಗರಿಬೊಮ್ಮನಹಳ್ಳಿ ತಾಲೂಕು

1.ಪಿ. ಚಂದನ
ರಾಷ್ಟ್ರೋತ್ಥಾನ ಪ್ರೌಢಶಾಲೆ, ಹ.ಬೊ. ಹಳ್ಳಿ
ಶಿಕ್ಷಕರು–ಎಲ್. ವೆಂಕಟೇಶ್

2. ಎಂ. ಮಹೇಶ್ವರಿ
ಕೌದಿ ಮಹಾಂತೇಶ್ವರ ಪ್ರೌಢಶಾಲೆ, ಬಾಚಿಗೊಂಡನಹಳ್ಳಿ
ಶಿಕ್ಷಕರು–ವಿ ಪ್ರಕಾಶಪ್ಪ

3. ಕೆ. ಶ್ರೀದೇವಿ
ಉಉಖ, ಉಪನಾಯಕನಹಳ್ಳಿ
ಶಿಕ್ಷಕರು–ಕವಿತಾ

4. ಬಿ.ಟಿ ಉಷ
ಶ್ರೀ ಗುರುಬಸವೇಶ್ವರ ಪ್ರೌಢಶಾಲೆ, ಬೆಣಕಲ್ಲು
ಶಿಕ್ಷಕರು–ಶಿವತನಯ ಎಸ್.ಸಿ

5. ಕೆ ನಂದಿತಾ
GHS, ವರದಾಪುರ
ಶಿಕ್ಷಕರು–ಮಂಜುಳಾ

6. ಕೆ. ಸಂಗೀತ
ಶ್ರೀ ಚಂದ್ರಮೌಳೇಶ್ವರ ಪ್ರೌಢಶಾಲೆ, ಹಂಪಾಪಟ್ಟಣ
ಶಿಕ್ಷಕರ ಹೆಸರು–ರಾಘವೇಂದ್ರ ಪಿ

7. ತನುಶ್ರೀ
ಕ್ರಿಸ್ತ ಶರಣ ವಿದ್ಯಾಪೀಠ
ಹಗರಿಬೊಮ್ಮನಹಳ್ಳಿ
ಶಿಕ್ಷಕರು– ಶೋಭಾ ನೆಲ್ಕುದ್ರಿ

8. ಹೆಚ್. ವೀಣ
GHS, , ವಟ್ಟಮ್ಮನಹಳ್ಳಿ
ಶಿಕ್ಷಕರು– ಸುಮಿತ್ರ

10. ಸುಧಾ ಬಿ
ಉಉಖ, ಗದ್ದಿಕೇರಿ
ಶಿಕ್ಷಕರು–ರವಿಚಂದ್ರ ನಾಯ್ಕ ಎಲ್

11. ಪಿ. ಸಹನ
ಎಲ್.ಎಚ್.ಎಸ್ ಪ್ರೌಢಶಾಲೆ, ಹಂಪಸಾಗರ
ಶಿಕ್ಷಕರು–ವಿಜಯಕುಮಾರ ಬೇಂದ್ರೆ

12. ಕೆ.ಶ್ರೀಧರ
ಕೆಪಿಜಿ ಪ್ರೌಢಶಾಲೆ, ತಂಬ್ರಹಳ್ಳಿ
ಶಿಕ್ಷಕರು–ರಾಜೇಶ್ವರಿ ಜೆ

13. ಎ. ಭಾವನ
ಶ್ರೀ ಗುರು ಕೊಟ್ಟೂರೇಶ್ವರ ಪ್ರೌಢಶಾಲೆ, ಮಾಲವಿ
ಶಿಕ್ಷಕರು–ಕೊಟ್ರೇಶ್

14. ಕೆ.ಎಸ್.ತುಳಸಿ
ಕೃಷ್ಣಮೂರ್ತಿ ರಾವ್ ಸ್ಮಾರಕ ಪ್ರೌಢಶಾಲೆ, ದಶಮಾಪುರ
ಶಿಕ್ಷಕರು–ಅನಿತಾ

15. ವೀರಮ್ಮ
ಶ್ರೀ ಗುರು ಶಿವಶಾಂತವೀರ ಪ್ರೌಢಶಾಲೆ, ಕಡ್ಲಬಾಳು
ಶಿಕ್ಷಕರು–ಪರಶುರಾಮ ಡಿ

16. ಕಾರ್ತಿಕ್ ಗೌಡ
GHS, ಸೊನ್ನ
ಶಿಕ್ಷಕರು– ಫಕೀರ್ ಗೌಡ ಪಾಟೀಲ್

17. ಹೆಚ್. ರಂಜಿತ
GHS, ತೆಲುಗೊಳಿ
ಶಿಕ್ಷಕರು– ರವೀಂದ್ರ

18. ಕೆ.ಸಂಜನ
GHS, ವಲ್ಲಭಾಪುರ
ಶಿಕ್ಷಕರು– ಶಾಹಿದ್ ಬಾಷ .ಎನ್

ಕೊಟ್ಟೂರು ತಾಲೂಕು

1. ಕೆ.ಬಿ.ನಂದಿನಿ
GHS, ಅಂಬಳಿ
ಶಿಕ್ಷಕರು–ಕೊಟ್ರೇಶ್ ನಾಯ್ಕ

ಹರಪನಹಳ್ಳಿ ತಾಲೂಕು

1. ಕೆ.ಅಭಿಶೇಕ
ಉಉಖ, ಕಡಬಗೆರೆ
ಶಿಕ್ಷಕರು–

ಗದಗ ಜಿಲ್ಲೆ

1.ಕಾವ್ಯ ಮಮಟಗೆರೆ
ಶ್ರೀ ಫಲಹಾರೇಶ್ವರ ಪ್ರೌಢಶಾಲೆ, ಹಸೂಟಿ ರೋಣ ತಾ. ಗದಗ ಜಿ.
ಶಿಕ್ಷಕರು–ಒ.ಗಿ ಪ್ರಕಾಶಾರಾಧ್ಯ

ಶಿವಮೊಗ್ಗ ಜಿ.

1. ಅಕ್ಷಯಕುಮಾರ
ಶ್ರೀ ಮಲ್ಲಿಕಾರ್ಜುನಸ್ವಾಮಿ ಪ್ರೌಢಶಾಲೆ, ಆಗರದ ಹಳ್ಳಿ
ಭದ್ರಾವತಿ ತಾ. ಶಿವಮೊಗ್ಗ ಜಿ.
ಶಿಕ್ಷಕರು–ಎಂ.ಜಿ ಮಂಜುನಾ

ಕಲಾಕುಸುರಿಯ ಬೀಡು

ಹಿರೇಹಡಗಲಿಯ ಕಲ್ಲೇಶ್ವರ ದೇವಸ್ಥಾನ

ನಮ್ಮ ಊರಿನ ಐತಿಹಾಸಿಕ ಕಲ್ಲೇಶ್ವರ ದೇವಸ್ಥಾನವನ್ನು ಕಲ್ಯಾಣಿ ಚಾಲುಕ್ಯರ ದೊರೆಯಾದ ತ್ರೈಲೊಕ್ಯ ಮಲ್ಲನ ಮಹಾ ಅಮಾತ್ಯನಾದ (ಮಂತ್ರಿ) ದೇಮರಾಜನು ಕ್ರಿಸ್ತಶಕ 1057ರಲ್ಲಿ ನಿರ್ಮಿಸಿದನು ಎಂದು ಇತಿಹಾಸಕಾರನಾದ ಆಡಂ ಹಾರ್ಡಿ ಉಲ್ಲೇಖಿಸಿರುತ್ತಾನೆ.

ದೇವಾಲಯದ ನಿರ್ಮಾತೃ ದೇಮರಾಜನಿಂದ ದೇಮೇಶ್ವರ ದೇವಾಲಯವೆಂದು ಹೆಸರುಬರಲು ಕಾರಣವಾಯಿತು ಎಂದು ದೇವಾಲಯದ ಆವರಣದಲ್ಲಿರುವ 1057 ರಲ್ಲಿ ಬರೆಸಿದ ಶಾಸನ ಉಲ್ಲೇಖಿಸಿದೆ. ಈ ಶಾಸನದಲ್ಲಿ ಹಿರೇಹಡಗಲಿಗೆ ಹೊಸ ವಡಂಗಿಲೆ ಎಂದು ಉಲ್ಲೇಖವಿದೆ. ಈ ದೇವಾಲಯಕ್ಕೆ ಸ್ಥಳೀಯವಾಗಿ ಕಟ್ಟೆ ಬಸವೇಶ್ವರ ದೇವಾಲಯ ಎಂದು ಕರೆಯುತ್ತಾರೆ. ವಿಶಾಲವಾದ, ಕೆರೆಯ ದಂಡೆಯ ಮೇಲೆ ನಿರ್ಮಿಸಿರುವ ಪೂರ್ವಾಭಿಮುಖವಾಗಿರುವ ಈ ದೇವಾಲಯ ದ್ವಿಕೂಟಾಚಲವಾಗಿದ್ದು, ಎರಡು ಗರ್ಭ ಗೃಹಗಳನ್ನು ಹೊಂದಿದೆ. ಇವುಗಳು ಉತ್ತರ ಮತ್ತು ಪೂರ್ವಾಭಿಮುಖವಾಗಿದ್ದು ಅಂತರಾಳವನ್ನು ಹೊಂದಿವೆ. ಇವುಗಳಲ್ಲಿ ನಾಲ್ಕು ಸ್ಥಂಭಗಳು ನವರಂಗಕ್ಕೆ ತೆಗೆದುಕೊಳ್ಳುತ್ತವೆ. ಇದಕ್ಕೆ ಹೊಂದಿಕೊಂಡು ದಕ್ಷಿಣಕ್ಕೆ ಮುಖಮಂಟಪವಿದೆ. ದಕ್ಷಿಣ ಮತ್ತು ಪೂರ್ವಕ್ಕೆ ಪ್ರವೇಶ

ದ್ವಾರಗಳಿವೆ.

ಈ ಮಂದಿರದ ಪೂರ್ವಕ್ಕೆ ನಂದಿಮಂಟಪವಿದ್ದು, ಇದನ್ನು ಪ್ರತ್ಯೇಕ ದೇವಾಲಯವಾಗಿ ಪರಿವರ್ತಿಸಲಾಗಿದೆ. ದೇವಾಲಯದ ಹೊರಗೆ ಗರ್ಭ ಗೃಹ, ಮುಖಮಂಟಪ ಮತ್ತು ಸಭಾ ಮಂಟಪದ ಭಾಗಗಳು ಸ್ತರ, ಮುಂಚಾಚು ಮತ್ತು ದೇವಕೋಷ್ಟಕಗಳನ್ನು ಒಳಗೊಂಡಿದ್ದು ಅವುಗಳನ್ನು ಅರ್ಧಸ್ತಂಭ ಮತ್ತು ಮಕರ ತೋರಣಗಳಿಂದ ಅಲಂಕರಿಸಲಾಗಿದೆ. ಈ ಕೋಷ್ಟಕಗಳಲ್ಲಿ ಇಂದ್ರ, ಶಿವ ಪಾರ್ವತಿಯರ, ಮತ್ತು ಲಕ್ಷ್ಮಿಯರ ಮೂರ್ತಿಗಳನ್ನು ಇರಿಸಲಾಗಿದೆ. ಗರ್ಭಗೃಹದ ಮೇಲ್ಚಾವಣಿಯು ವೃತ್ತ ಕಮಲದಿಂದ ಕೂಡಿದೆ. ಅಂತರಾಳ ಭಾಗದ ತಳಭಾಗದಲ್ಲಿ ದ್ವಾರಪಾಲಕರು ರತಿ ಮನ್ಮಥರ ಮೂರ್ತಿಗಳನ್ನು ಕೆತ್ತಲಾಗಿದೆ ಬಾಗಿಲಿನ ಸೂರಿನಲ್ಲಿ ಬ್ರಹ್ಮ ಕೇಶವ ಶಿವನ ಸುಂದರವಾದ ಮೂರ್ತಿಗಳನ್ನು ಕೆತ್ತಲಾಗಿದೆ. ಹಡಗಲಿ–ರಾಣೆಬೆನ್ನೂರು ರಸ್ತೆಯ ಪಕ್ಕದಲ್ಲಿ ಈ ಸುಂದರ ದೇವಾಲಯವು ಇದ್ದು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ.

– ರಾಜಾಭಕ್ಷಿ, 9ನೇ ತರಗತಿ,
ವಿಕೆಕೆ ಕೆಪಿಎಸ್ ಪ್ರೌಢಶಾಲಾ ವಿಭಾಗ
ಹಿರೇಹಡಗಲಿ

ಪ್ರವಾಸೋದ್ಯಮ ಇಲಾಖೆ; ತರಬೇತಿಗೆ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರವಾಸೋದ್ಯಮ ಇಲಾಖೆ ವತಿಯಿಂದ ಎಸ್.ಸಿ.ಎಸ್.ಪಿ ಹಾಗೂ ಟಿ.ಎಸ್.ಪಿ ಯೋಜನೆ ಅಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಠ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಹಾಗೂ ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರಾದ ಪ್ರಭುಲಿಂಗ.ಎಸ್ ತಳಕೇರಿ ಅವರು ತಿಳಿಸಿದ್ದಾರೆ.

ಆಸಕ್ತ ಅಭ್ಯರ್ಥಿಗಳು ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಕಮಲಾಪುರದ ಲೋಟಸ್ ಮಹಲ್ ಬಳಿಯ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ಪಡೆದು, ಭರ್ತಿ ಮಾಡಿ ಡಿ.28ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು.

ತರಬೇತಿ ವಿವರ ಹಾಗೂ ವಿದ್ಯಾರ್ಹತೆ: ಅಭ್ಯರ್ಥಿಯ ವಯಸ್ಸು ಕನಿಷ್ಠ 20 ರಿಂದ 45 ವರ್ಷದೊಳಗಿರಬೇಕು. ಆಹಾರ ಮತ್ತು ಪಾನೀಯ ಸೇವೆಯ ಉಸ್ತುವಾರಿ (ಫುಡ್ ಅಂಡ್ ಬೆವರೇಜ್ ಸರ್ವೀಸ್ ಸ್ಟೇವರ್ಡ್): ತರಬೇತಿಯ ಕಾಲಾವಧಿ 04 ತಿಂಗಳು ಹಾಗೂ ಹತ್ತನೇ ತರಗತಿ ಉತ್ತೀರ್ಣರಾಗಿರಬೇಕು. ಕೊಠಡಿ ಪರಿಚಾರಕ (ರೂಮ್ ಅಟೆಂಡಂಟ್): ತರಬೇತಿಯ ಕಾಲಾವಧಿ 04 ತಿಂಗಳು ಹಾಗೂ ಐದನೇ ತರಗತಿ ಉತ್ತೀರ್ಣರಾಗಿರಬೇಕು.

ಕಚೇರಿ ಮುಂಭಾಗದ ಸಹವರ್ತಿ (ಫ್ರಂಟ್ ಆಫೀಸ್ ಅಸೋಸಿಯೇಟ್): ತರಬೇತಿಯ ಕಾಲಾವಧಿ 04 ತಿಂಗಳು ಹಾಗೂ ಹನ್ನೆರಡನೇ ತರಗತಿ ಉತ್ತೀರ್ಣರಾಗಿರಬೇಕು.

ಬಹು ತಿನಿಸು ಕುಕ್ (ಮಲ್ಟಿ ಕ್ಯೂಸೈನ್ ಕುಕ್): ತರಬೇತಿಯ ಕಾಲಾವಧಿ 05 ತಿಂಗಳು ಹಾಗೂ ಎಂಟನೇ ತರಗತಿ ಉತ್ತೀರ್ಣರಾಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಕಮಲಾಪುರ ಗ್ರಾಮದ ಲೋಟಸ್ ಮಹಲ್ ಬಳಿಯ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರ ಕಚೇರಿ ಅಥವಾ ದೂ:08394–295640ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ SSLC: ಗಣಿತ ಕಲಿಕೆ ನಿನ್ನದೆ ಕಿಲ್ಲಿ

ಸಂಭವನೀಯತೆ

ಕಾರ್ಡ್	ಸಂಖ್ಯೆಗಳ ಕಾರ್ಡ್‌ಗಳು									Ace (A)	ಗೌರವಾನ್ವಿತ ಮುಖ ಕಾರ್ಡ್‌ಗಳು		
ಸ್ಪೇಡ್	2	3	4	5	6	7	8	9	10	A	ರಾಜ	ರಾಣಿ	ಜಾಕ್
ಕ್ಲಬ್	2	3	4	5	6	7	8	9	10	A	ರಾಜ	ರಾಣಿ	ಜಾಕ್
ಹಾರ್ಟ್	2	3	4	5	6	7	8	9	10	A	ರಾಜ	ರಾಣಿ	ಜಾಕ್
ಡೈಮಂಡ್	2	3	4	5	6	7	8	9	10	A	ರಾಜ	ರಾಣಿ	ಜಾಕ್

1) ಕೆಂಪು ಬಣ್ಣದ ಗೌರವಾನ್ವಿತ ಮುಖ ಕಾರ್ಡ್ ಮೇಲೆ ಬರುವ ಸಂಭವನೀಯತೆ:

"ಗೌರವಾನ್ವಿತ ಮುಖ ಕಾರ್ಡ್" ಎಂದರೆ ರಾಜ, ರಾಣಿ, ಜಾಕ್ (King, Queen, Jack). ಕೆಂಪು ಬಣ್ಣದ ಕಾರ್ಡ್‌ಗಳು ಹಾರ್ಟ್ (Hearts) ಮತ್ತು ಡೈಮಂಡ್(Diamonds) ಗಳಲ್ಲಿವೆ.

ಕೆಂಪು ಬಣ್ಣದ ಗೌರವಾನ್ವಿತ ಮುಖ ಕಾರ್ಡ್‌ಗಳು:

ಹಾರ್ಟ್ ನಲ್ಲಿ 3 (ರಾಜ, ರಾಣಿ, ಜಾಕ್)

ಡೈಮಂಡ್ನಲ್ಲಿ 3 (ರಾಜ, ರಾಣಿ, ಜಾಕ್)

ಹೀಗಾಗಿ, ಒಟ್ಟಾರೆ 6 ಕೆಂಪು ಗೌರವಾನ್ವಿತ ಮುಖ ಕಾರ್ಡ್‌ಗಳು ಇವೆ. **n(E) = 6** **n(S) = 52**

ಹಾಗಾಗಿ, ಕೆಂಪು ಬಣ್ಣದ ಗೌರವಾನ್ವಿತ ಮುಖ ಕಾರ್ಡ್ ಮೇಲೆ ಬರುವ ಸಂಭವನೀಯತೆ: $P(E) = \frac{n(E)}{n(S)} = \frac{6}{52} = \frac{3}{26}$

(2) ಕಪ್ಪು ಬಣ್ಣದ ಸಂಖ್ಯಾ ಕಾರ್ಡ್ ಮೇಲೆ ಬರುವ ಸಂಭವನೀಯತೆ:

ಹೀಗಾಗಿ, ಒಟ್ಟಾರೆ 18 ಕಪ್ಪು ಸಂಖ್ಯಾ ಕಾರ್ಡ್‌ಗಳು ಇವೆ (9 ಸ್ಪೇಡ್ + 9 ಕ್ಲಬ್). **n(E) = 18** **n(S) = 52**

ಹಾಗಾಗಿ, ಕಪ್ಪು ಬಣ್ಣದ ಸಂಖ್ಯಾ ಕಾರ್ಡ್ ಮೇಲೆ ಬರುವ ಸಂಭವನೀಯತೆ: $P(E) = \frac{n(E)}{n(S)} = \frac{18}{52} = \frac{9}{26}$

**ಹಾರ್ಟ್ ರಾಜ, ರಾಣಿ, ಜಾಕ್ ಹೊರತುಪಡಿಸಿದ ಕಾರ್ಡ್ ಗಳಲ್ಲಿ ರಾಜನನ್ನು ಪಡೆಯುವ ಸಂಭವನೀ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ.
ಡಿ.ವಿ.ಜಿ.

ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

18-12-2024 – ಬುಧವಾರ

ತಿಥಿ	: ತೃತೀಯ
ಪಕ್ಷ	: ಕೃಷ್ಣ
ನಕ್ಷತ್ರ	: ಪುಷ್ಯ
ಯೋಗ	: ಇಂದ್ರ
ಕರಣ	: ವಿಷ್ಟಿ
ಸೂರ್ಯೋದಯ	: 07:03:34
ಸೂರ್ಯಾಸ್ತ	: 17:43:57
ರಾಹು ಕಾಲ	: 12:24-13:44
ಯಮಘಂಡ ಕಾಲ	: 08:24-09:44
ಗುಳಿಕ ಕಾಲ	: 11:04-12:24

ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 17-12-2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1629.00 ಅಡಿ
ಒಳ ಹರಿವು	2395 ಕ್ಯುಸೆಕ್
ಹೊರ ಹರಿವು	2320 ಕ್ಯುಸೆಕ್
ಇಂದಿನ ಸಾಮರ್ಥ್ಯ	90.346 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಇಂದಿನ ಮಟ್ಟ	1590.47 ಅಡಿ
ಒಳ ಹರಿವು	0 ಕ್ಯುಸೆಕ್
ಹೊರ ಹರಿವು	1916 ಕ್ಯುಸೆಕ್
ಸಾಮರ್ಥ್ಯ	11.431 ಟಿಎಂಸಿ

ಸಂಗೀತ ಸಾಧಕರಾಗಲು ಅವಿರತ ಪರಿಶ್ರಮ ಅಗತ್ಯ

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ। ಹಳೆಯ ವಿದ್ಯಾರ್ಥಿಗಳ ಹಾಗೂ ಪಾಲಕರ ಸಮಾವೇಶ

■ ಹಂಪಿ ಟೈಮ್ಸ್ ಹೊಸಪೇಟೆ

ಸಂಗೀತಕ್ಕೆ ವಯಸ್ಸಿನ ನಿರ್ಬಂಧವಿಲ್ಲ. ಸಣ್ಣವರು, ದೊಡ್ಡವರು ಎಂಬ ತಾರತಮ್ಯವಿಲ್ಲ ಎಂದು ಬಳ್ಳಾರಿಯ ಹಿಂದೂಸ್ತಾನಿ ಸಂಗೀತಗಾರರಾದ ದೊಡ್ಡಯ್ಯ ಗವಾಯಿಗಳು ಹೇಳಿದರು.

ಕನ್ನಡ ವಿಶ್ವವಿದ್ಯಾಲಯ ಸಂಗೀತ ಮತ್ತು ನೃತ್ಯ ವಿಭಾಗ ಹಾಗೂ ಪಂಡಿತ್ ವಿರೂಪಾಕ್ಷಪ್ಪ ಇಟಗಿ ಶಿಷ್ಯ ಬಳಗ ಇವರ ಸಹಯೋಗದಲ್ಲಿ ಮಂಟಪ ಸಭಾಂಗಣದಲ್ಲಿ ಮಂಗಳವಾರ ರಂಗ ಸಂಗೀತೋಪಾಸಕ ವಿರೂಪಾಕ್ಷಪ್ಪ ಇಟಗಿ ಪುಸ್ತಕ ಬಿಡುಗಡೆ ಹಾಗೂ ಸಂಗೀತ ಮತ್ತು ನೃತ್ಯ ವಿಭಾಗದ ಹಳೆಯ ವಿದ್ಯಾರ್ಥಿಗಳ ಹಾಗೂ ಪಾಲಕರ ಸಮಾವೇಶವನ್ನು ತಂಬೂರಿ ಮೀಟಿ ಉದ್ಘಾಟಿಸಿ ಮಾತನಾಡಿದರು.

ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗದ ನಿರ್ದೇಶಕರಾದ ಡಾ. ಅಮರೇಶ ಯತಗಲ್ ರಂಗ ಸಂಗೀತೋಪಾಸಕ ವಿರೂಪಾಕ್ಷಪ್ಪ ಇಟಗಿ ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿ, ಈ ಪುಸ್ತಕವು ಮುಂದಿನ ತಲೆಮಾರಿಗೆ ದಾರಿದೀಪವಾಗಿದೆ. ವಿರೂಪಾಕ್ಷಪ್ಪ ಇಟಗಿಯವರು ಶಾಲೆಗೇ ಹೋಗದ ಸಾಧಕ ಏಕಲವ್ಯನಂತೆ ಸಂಗೀತೋಪಾಸನೆ ಮಾಡಿದ್ದಾರೆ. ನಾದವನ್ನು ನಾದಬೇಕು ಎಂದು ಕಂಬಾರರು ಹೇಳಿದಂತೆ ಸಂಗೀತ ವಿಭಾಗದಲ್ಲಿ ಸಂಗೀತ ಕಲಿಕೆ ನಡೆಯುತ್ತಿದೆ. ಸಂಗೀತ ಮತ್ತು ನೃತ್ಯ ವಿಭಾಗವು ಹೊಸ ಹೊಸ

ಪ್ರಯೋಗಗಳನ್ನು ಮಾಡಿ ಕೊಂಡು ಬರುತ್ತಿದೆ. ಸಮಾಜಕ್ಕೂ ಮತ್ತು ಕನ್ನಡ ವಿಶ್ವ ವಿದ್ಯಾಲಯಕ್ಕೂ ಸೇತುವೆ ಕಟ್ಟುವ ಕೆಲಸವನ್ನು ಪಾಲಕರ ಸಮಾವೇಶದ ಮೂಲಕ ಮಾಡುತ್ತಿದೆ ಎಂದು ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅವರು ವಿರೂಪಾಕ್ಷಪ್ಪ ಇಟಗಿಯ ವರನ್ನು ಹಾಗೂ ದೊಡ್ಡಯ್ಯ ಗವಾಯಿಗಳನ್ನು ಗೌರವಿಸಿ ಮಾತನಾಡಿದರು. ಪ್ರೀತಿಯ ಹೃದಯಗಳಿಂದ ಸನ್ಮಾನಕ್ಕೆ ಒಳಗಾದ ವಿರೂಪಾಕ್ಷಪ್ಪ ಇಟಗಿಯವರು ನಮ್ಮಲ್ಲೆ ಇರುವ ಅಮೂಲ್ಯ ರತ್ನ. ಇಂದಿನ ಕಾಲ ಪ್ರಚಾರ ಕಾಲವಾಗಿದೆ. ಎಷ್ಟೋ ಉತ್ತಮ ಕಲಾವಿದರು ನೇಪಥ್ಯಕ್ಕೆ ಸರಿದು ಹೋಗುತ್ತಾರೆ. ಇಪ್ಪತ್ತು ವರ್ಷಗಳಿಂದ ಕನ್ನಡ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ವಿರೂಪಾಕ್ಷಪ್ಪ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ವರದಾನವಾಗಿದ್ದಾರೆ. ವಿದ್ಯೆ ಕಲಿಸಿದ ಗುರುವಿಗೆ ನಮ್ಮ ಆವರಣದಲ್ಲಿ ವಿದ್ಯಾರ್ಥಿಗಳು ಸನ್ಮಾನ ಮಾಡಿರುವುದು ಅತ್ಯುತ್ತಮ ಕೆಲಸ. ಕಲೆ ಎಲ್ಲರಿಗೂ ಸುಲಭವಾಗಿ ಒಲಿಯುವುದಿಲ್ಲ. ಎಲ್ಲರೂ ಸಂಗೀತಗಾರರಾಗಬಹುದು. ಆದರೆ ಎಲ್ಲರೂ ಸಾಧಕರಾಗಲೂ ಸಾಧ್ಯವಿಲ್ಲ. ನೀವೆಲ್ಲ ಸಾಧಕರಾಗಬೇಕು ಎಂದು ವಿದ್ಯಾರ್ಥಿಗಳಿಗೆ ಪ್ರೀತಿಯಿಂದ ಕರೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಗೀತ ಮತ್ತು ನೃತ್ಯ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ ಅವರು ವಿರೂಪಾಕ್ಷಪ್ಪ ಇಟಗಿಯವರು ದೊಡ್ಡ ವಿದ್ವಾಂಸರು. ವೃತ್ತಿ ರಂಗಭೂಮಿಯಲ್ಲಿ ಪುಟ್ಟರಾಜ ಗವಾಯಿಗಳೊಂದಿಗೆ ಅವರ ನಾಟಕ ಕಂಪನಿಯಲ್ಲಿ ಕೆಲಸ ಮಾಡಿದ್ದಾರೆ. ಸ್ವಾಭಿಮಾನಿಯಾದ ಇವರು ಶ್ರಮಸಂಸ್ಕೃತಿ ಯನ್ನು ಮೈಗೂಡಿಸಿಕೊಂಡಿದ್ದಾರೆ. ಪಾಲಕರು ತಮ್ಮ ಮಕ್ಕಳು ಹಾಡುವುದನ್ನು ನೋಡಲಿ, ತಮ್ಮ ಮಕ್ಕಳ ಬಗ್ಗೆ ಪಾಲಕರಿಗೂ ಆತ್ಮವಿಶ್ವಾಸ ಬರಲಿ ಎಂದು ತಿಳಿಸಿದರು.

ನಿವೃತ್ತ ಎ.ಎಸ್.ಐ. ಶಾಂತಪ್ಪ ಬೆಲ್ಲದ ಹಾಗೂ ಮಾರುತಿರಾವ್ ಅವರು ಅನಿಸಿಕೆಗಳನ್ನು ಹಂಚಿಕೊಂಡರು. ವಿದ್ಯಾರ್ಥಿ ರವಿವರ್ಮ ಹಾಗೂ ವೀರೇಶ ದಳವಾಯಿ ಕಾರ್ಯಕ್ರಮ ನಿರೂಪಣೆ ಮಾಡಿದರು. ಕಾರ್ಯಕ್ರಮದ ಸಂಚಾಲಕರಾದ ವಿದ್ಯಾರ್ಥಿ ಗುಂಡಿ ಭರತ್ ಸ್ವಾಗತಿಸಿದರು. ಮತ್ತೋರ್ವ ವಿದ್ಯಾರ್ಥಿ ಹರೀಶ್ ಭಂಡಾರಿ ವಂದಿಸಿದರು. ಕಾರ್ಯಕ್ರಮಕ್ಕೆ ಮೊದಲು ನಿಧನರಾದ ತಬಲ ಮಾಂತ್ರಿಕ ಉಸ್ತಾದ್ ಝಾಕೀರ್ ಹುಸೇನ್ ಹಾಗೂ ವೃಕ್ಷ ಮಾತೆ ತುಳಸಿಗೌಡ ಅವರಿಗೆ ಮೌನಾಚರಣೆ ಮೂಲಕ ಸಂತಾಪ ಸೂಚಿಸಿದರು. ಭಾಷಾ ನಿಕಾಯದ ಡೀನರಾದ ಡಾ. ಎಫ್.ಟಿ.ಹಳ್ಳಿಕೇರಿ ಹಾಗೂ ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಅಧಿಕಾರಿಗಳು, ಸಿಬ್ಬಂದಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪಾಲಕರು ಉಪಸ್ಥಿತರಿದ್ದರು.

ಗುಡೇಕೋಟೆ ಪೊಲೀಸ್‌ರಿಂದ ಅಪರಾಧ ತಡೆ ಜಾಗೃತಿ ಮಾಸಾಚರಣೆ ಜಾಥ

ಅಪರಾಧದಲ್ಲಿ ಭಾಗಿಯಾದರೆ ಉಜ್ವಲ ಭವಿಷ್ಯ ಇರದು

ಕಾನೂನಿನ ಬಗ್ಗೆ ತಿಳಿದುಕೊಂಡು ಗೌರವ ಬೆಳೆಸಿಕೊಳ್ಳಿ: ಪಿಎಸ್‌ಯ ಸುಬ್ರಹ್ಮಣ್ಯ

■ ಹಂಪಿ ಟೈಮ್ಸ್ ಕೂಡ್ಲಿಗಿ

ವಿಧ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಕಾನೂನಿನ ಬಗ್ಗೆ ಗೌರವ ಹಾಗೂ ಪ್ರಸ್ತುತ ಸಮಾಜದಲ್ಲಿ ಸಂಭವಿಸುತ್ತಿರುವ ಘಟನೆಗಳ ಬಗ್ಗೆ ಮುಂಜಾಗ್ರತೆ ವಹಿಸಿದರೆ ನಡೆಯುತ್ತಿರುವ ಅಪರಾಧಗಳನ್ನು ತಡೆಗಟ್ಟಲು ಸಾಧ್ಯ ಎಂದು ಗುಡೇಕೋಟೆ ಪಿಎಸ್‌ಐ ಸುಬ್ರಹ್ಮಣ್ಯಂ ತಿಳಿಸಿದರು.

ತಾಲೂಕಿನ ಗುಡೇಕೋಟೆ ಗ್ರಾಮದಲ್ಲಿ ಗುಡೇಕೋಟೆ ಪೊಲೀಸ್ ಠಾಣೆ ವತಿಯಿಂದ ಅಪರಾದ ತಡೆ ಮಾಸಾಚರಣೆ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರಸ್ತುತ ಸಮಾಜದಲ್ಲಿ ಒಂದಲ್ಲ ಒಂದು ರೀತಿಯ ಅಪರಾಧಗಳಾಗುತ್ತಿವೆ. ಕಾನೂನಿನ ಬಗ್ಗೆ ಅವರಿಗಿರುವ ತಾತ್ಸಾರ ಮನೋಭಾವನೆಯೇ ಇದಕ್ಕೆ ಕಾರಣ. ಇಂಥ ಪ್ರಕರಣಗಳ ಬಗ್ಗೆ ವಿದ್ಯಾರ್ಥಿ, ಸಾರ್ವಜನಿಕ ವಲಯದಲ್ಲಿ ಜಾಗೃತಿ ಮೂಡಿಸಿ ಅಪರಾಧ ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಅಪರಾಧ ತಡೆಗಟ್ಟುವ ಮಾಸಾಚರಣೆ ಆಯೋಜಿಸಲಾಗಿದೆ ಎಂದರು. ವಿದ್ಯಾರ್ಥಿ ಸಮೂಹದ ಮೇಲೆ ಅಪರಾಧ

ತಡೆಗಟ್ಟುವ ಗುರುತರ ಜವಾಬ್ದಾರಿ ಇದ್ದು, ಮೊದಲು ವಿದ್ಯಾರ್ಥಿಗಳು ಜಾಗೃತಿಗೊಂಡು ಸಾರ್ವಜನಿಕರಿಗೆ ತಿಳಿ ಹೇಳಬೇಕು. ಇಂದು ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಅತ್ಯಾಚಾರ, ಲೈಂಗಿಕ ಕಿರುಕುಳ ಮತ್ತಿತರ ದೌರ್ಜನ್ಯಗಳ ಬಗ್ಗೆ ಸದಾ ಜಾಗೃತಿವಹಿಸಬೇಕು. ಇತ್ತೀಚಿಗೆ ಯುವ ಸಮೂಹ ಮಾದಕ ವ್ಯಸನಕ್ಕೆ ದಾಸರಾಗಿ ಅಪರಾಧ ಮಾಡುವ ಜತೆ ಜೀವನವನ್ನೆ ಹಾಳು ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಯುವ ಜನತೆ ಜವಾಬ್ದಾರಿ ಅರಿತು ಈ ದೇಶದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ಅಪರಾಧ ತಡೆ ಮಾಸಚರಣೆ ಅಂಗವಾಗಿ ಪೊಲೀಸ್ ಠಾಣೆಯಿಂದ ಗ್ರಾಮದ ಪ್ರಮುಖ ವೃತ್ತಗಳಲ್ಲಿ ಜಾಗೃತಿ ಮೂಡಿಸಲಾಯಿತು. ಮುಖಂಡರಾದ ಬಂಗಾಳಿ ಓಬಯ್ಯ, ಮಾಜಿ ತಾಪಂ ಸದಸ್ಯ ರಾಜಪ್ಪ, ಹುಲಿಕುಂಟೆ ಬಸವರಾಜ, ನಾಗರಾಜ, ದಾದ ಖಲಂದರ, ಬೋರಯ್ಯ, ಪೊಲೀಸ್ ಸಿಬ್ಬಂದಿಗಳಾದ ನಾಗೇಶ, ಮಹಾಂತೇಶ್ ಇದ್ದರು.

ಜಿಲ್ಲಾ ಕಚೇರಿ ಸ್ಥಳ ಬದಲಾವಣೆ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮತದ ಈ ಹಿಂದೆ ಇದ್ದ ಜಿಲ್ಲಾ ಕಚೇರಿಯ ಸ್ಥಳವನ್ನು ನಗರದ ಜೋಳದರಾಶಿ ದೊಡ್ಡನಗೌಡ ರಂಗ ಮಂದಿರ ಬಳಿಯ ಮುಸ್ಲಿಂ ಶಾದಿ ಮಹಲ್ ಪಕ್ಕದ ಮೌಲಾನ ಆಜಾದ್ ಭವನದಲ್ಲಿನ 1ನೇ ಮಹಡಿಗೆ ಕಚೇರಿ ಸ್ಥಳಾಂತರಿಸಲಾಗಿದ್ದು, ಸಾರ್ವಜನಿಕರು ಸಹಕರಿಸಬೇಕೆಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಡಿ.20 ರಂದು ಪೂರ್ವಭಾವಿ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಿ.29 ರಂದು ಕುವೆಂಪು ಜನ್ಮದಿನದ ಅಂಗವಾಗಿ ವಿಶ್ವಮಾನವ ದಿನಾಚರಣೆ ಹಾಗೂ ಜ.01 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಚಾರಿ ಸಂಸ್ಮರಣಾ ದಿನಾಚರಣೆ ನಿಮಿತ್ತ ಡಿ.20 ರಂದು ಸಂಜೆ 4.30 ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿದ್ದಾರೆ.

ಡಿ. 21 ರಂದು ವಿವಿಧ ಜಯಂತಿಗಳ ಆಚರಣೆ ಪೂರ್ವಭಾವಿ ಸಭೆ

ಹಂಪಿ ಟೈಮ್ಸ್ ಹೊಸಪೇಟೆ

ಡಿಸೆಂಬರ್ 29 ರಂದು ವಿಶ್ವ ಮಾನವ ದಿನಾಚರಣೆ ಹಾಗೂ ಜನವರಿ 1 ರಂದು ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮಗಳ ಅಂಗವಾಗಿ ಡಿಸೆಂಬರ್ 21 ರಂದು ಪೂರ್ವಭಾವಿ ಸಿದ್ಧತಾ ಸಭೆಯನ್ನು ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳ ಲಾಗಿದೆ. ಅಂದು ಬೆಳಿಗ್ಗೆ 11 ಗಂಟೆಗೆ ವಿಶ್ವಮಾನವ ದಿನಾಚರಣೆ ಮತ್ತು ಬೆಳಿಗ್ಗೆ 11.30 ಕ್ಕೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯ ಪೂರ್ವಭಾವಿ ಸಭೆಯನ್ನು ಹಮ್ಮಿಕೊಂಡಿದ್ದು, ಸಭೆಗೆ ಜಿಲ್ಲೆಯ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿರಬೇಕೆಂದು ತಿಳಿಸಲಾಗಿದೆ.

Advertise With Us
Reach Thousands of Potential Customers!
Contact for More information
M: 94486 33038

ಜೇನು ತುಪ್ಪ ಮಾರಾಟಕ್ಕೆ ಝೇಂಕಾರ ಬ್ರ್ಯಾಂಡ್ ಬಳಸಲು ಸೂಚನೆ

ಹಂಪಿ ಟೈಮ್ಸ್ ಹೊಸಪೇಟೆ

ತೋಟಗಾರಿಕೆ ಇಲಾಖೆ ವತಿಯಿಂದ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಜೇನುತುಪ್ಪಕ್ಕೆ ಝೇಂಕಾರ ನೊಂದಾಯಿತ ಬ್ರ್ಯಾಂಡ್ ಹೆಸರು ಟ್ಯಾಗ್‌ಲೈನ್ ಮತ್ತು ಲೋಗೋಗಳನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಸಿ.ಜೆ.ಚಿದಾನಂದಪ್ಪ ತಿಳಿಸಿದ್ದಾರೆ.

ಆಸಕ್ತ ಜೇನು ಉತ್ಪಾದಕರು ಝೇಂಕಾರ ಬ್ರ್ಯಾಂಡ್ ಅನ್ನು ಉಪಯೋಗಿಸಿಕೊಂಡು ಮಾರಾಟ ಮಾಡಬೇಕಿದೆ. ಪ್ರಸ್ತುತ ಜೇನು ಉತ್ಪಾದಕರು ಮತ್ತು ಜೇನು ಸಂಗ್ರಹಕಾರರು ತೋಟಗಾರಿಕೆ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ವಿಜಯನಗರ ಜಿಲ್ಲಾ ತೋಟಗಾರಿಕೆ ಉಪನಿರ್ದೇಶಕರ ಕಚೇರಿಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

13 ದಿನದಲ್ಲಿ ಪಾಕಿಸ್ತಾನವನ್ನು ಸೋಲಿಸಿದ ಭಾರತ

ವಿಜಯ ದಿವಸ ಆಚರಣೆ

■ ಹಂಪಿ ಟೈಮ್ಸ್ ಬಳ್ಳಾರಿ

ನೆಹರು ಯುವ ಕೇಂದ್ರ, ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯ, ಸಮಾಜ ಕಲ್ಯಾಣ ಇಲಾಖೆ ಕಲ್ಯಾಣ ಕರ್ನಾಟಕ ಹಾಗೂ ಮಾಜಿ ಅರೆ ಸೇನಾಪಡೆಗಳ ಕ್ಷೇಮಾಭಿವೃದ್ಧಿ ಇವರ ಸಹಯೋಗದಲ್ಲಿ ನಗರದ ಸರ್ಕಾರಿ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ (ನಂಬರ್ ಒನ್) ಸೋಮವಾರ ದಂದು ವಿಜಯ ದಿವಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಭಾರತವು 1971 ಡಿಸೆಂಬರ್ 03 ರಿಂದ 16 ಹೊರಗೆ ನಡೆದಂತ ಯುದ್ಧದಲ್ಲಿ ಕೇವಲ 13 ದಿನಗಳಲ್ಲಿ ಪಾಕಿಸ್ತಾನವನ್ನು ಸೋಲಿಸಿದ ಅಂಗವಾಗಿ ವಿಜಯ ದಿವಸ ಆಚರಿಸಲಾಗುತ್ತದೆ. ಇದೇ ವೇಳೆ ಸಮಾಜ ಕಲ್ಯಾಣ ಇಲಾಖೆ ಹಾಗೂ ನೆಹರು ಯುವ ಕೇಂದ್ರ ವತಿಯಿಂದ ಮಾಜಿ ಅರೆ ಸೈನಿಕರಿಗೆ ಮತ್ತು ಮುಖ್ಯ ಅತಿಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಬಿ. ಮಲ್ಲಿಕಾರ್ಜುನ, ಟ್ರಾಫಿಕ್ ಪೊಲೀಸ್ ಇನ್ಸ್‌ಪೆಕ್ಟರ್ ಅಯ್ಯನಗೌಡ ಪಾಟೀಲ್, ಮತ್ತು ಮಾಜಿ ಸೈನಿಕರಾದ ಎಂ.ಎಸ್.ರಾವ್, ಇಂದಿರಾ ನಗರದ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಲತಾ, ಕಲ್ಯಾಣ ಕರ್ನಾಟಕ ಮಾಜಿ ಅರೆ ಸೇನೆ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎನ್ ಪ್ರಹ್ಲಾದ ರೆಡ್ಡಿ, ಉಪಾಧ್ಯಕ್ಷ ಈಶ್ವರ ರೆಡ್ಡಿ ಸೇರಿದಂತೆ ನಿರ್ದೇಶಕರು, ವಸತಿ ನಿಲಯದ ವಾರ್ಡನ್, ವಿದ್ಯಾರ್ಥಿಗಳು ಇದ್ದರು.

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038